MANUVIKASA

# ಮನುವಿಕಾಸ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾ ಪತ್ರ ಖಾಸಗಿ ಪ್ರಚಾರಕ್ಕಾಗಿ ಮಾತ್ರ

EdelGive Foundation
An Edelweiss Initiative

ಸಂಪಾದಕರು : ಗಣಪತಿ ಭಟ್ಟ

ಸಂಪಾದಕೀಯ ಮಂಡಳಿ – ಶುಭಾ ಪೈ, ಗಣಪತಿ ಹೆಗಡೆ, ಶ್ರೀಕಾಂತ ಹೆಗಡೆ

ಸಂಚಿಕೆ : 5 ಸಂಪುಟ : 8




## ಮನುವಿಕಾಸದಿಂದ ಗ್ರಾಮೀಣ ಸಮುದಾಯದ ಜೀವನೋಪಾಯ ಕೌಶಲ್ಯ ವಿಕಾಸ

'ಜ್ಞಾನಕ್ಕೆ ದಾರಿ ಕೌಶಲ್ಯವಾದರೆ ಕೌಶಲ್ಯವನ್ನು ತಲುಪುವ ದಾರಿ ನಿರಂತರವಾದ ಅಭ್ಯಾಸ' ಎನ್ನುವ ಮಾತಿದೆ. ಗ್ರಾಮೀಣ ಸಮುದಾಯಕ್ಕೆ ಅದರಲ್ಲೂ ಮಹಿಳೆಯರಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು ನೀಡುವ ಮೂಲಕ ಅವರೂ ಸಹ ಸಮಾಜದಲ್ಲಿ ಆರ್ಥಿಕ ಸ್ವಾವಲಂಬನೆ, ಸ್ವ– ಉದ್ಯೋಗ ಮತ್ತು ಪರ್ಯಾಯ ಜೀವನೋಪಾಯ ನಿರ್ವಹಣೆಯ ದಾರಿಯನ್ನು ಕಂಡುಕೊಳ್ಳಲು ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಮನುವಿಕಾಸ ಸಂಸ್ಥೆ ಕಳೆದ 23 ವರ್ಷಗಳಿಂದ ಅವಿರತ ಪ್ರಯತ್ನಗಳನ್ನು ಮಾಡುತ್ತಿದೆ.

ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ, ಧಾರವಾಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಂಸ್ಥೆ, ಗ್ರಾಮೀಣ ಸಮುದಾಯಕ್ಕಾಗಿ ಹಲವಾರು ಪ್ರಗತಿಪರ ಯೋಜನೆಗಳನ್ನು ಜಾರಿಗೆ ತಂದು ಅನುಷ್ಠಾನಗೊಳಿಸುತ್ತಿದೆ. ಗ್ರಾಮೀಣ ಮಹಿಳೆಯರು ಮತ್ತು ಯುವಕ ಯುವತಿಯರಿಗೆ ಇರುವ ಸೀಮಿತ ಅವಕಾಶಗಳನ್ನು ಅರಿತು ಸಂಸ್ಥೆ ಗ್ರಾಮೀಣ ಮಟ್ಟದಲ್ಲಿಯೇ ಹಲವಾರು ಕೌಶಲ್ಯಾಧಾರಿತ ತರಬೇತಿಗಳನ್ನು ಆಯೋಜನೆ ಮಾಡುತ್ತಿದೆ.

ಸುಸ್ಥಿರ ಕೃಷಿ, ಹೈನುಗಾರಿಕೆ, ಬ್ಯೂಟಿಶಿಯನ್, ಕೇಟರಿಂಗ್, ಸುಧಾರಿತ ಹೊಲಿಗೆ, ಡ್ರೈವಿಂಗ್ ಮೊದಲಾದ ತರಬೇತಿಗಳು ಮಹಿಳೆಯರಿಗಾದರೆ, ಕಛೇರಿ ಮತ್ತು ಲೆಕ್ಕಪತ್ರ ನಿರ್ವಹಣೆ, ಫೋಟೊಗ್ರಾಫಿ ಮತ್ತು ವಿಡಿಯೊಗ್ರಾಫಿ, ಶಾಪ್‌ಕೀಪಿಂಗ್ ಮತ್ತು ರಿಟೈಲ್ ಮಾರ್ಕೆಟಿಂಗ್, ವಿಡಿಯೋ ಎಡಿಟಿಂಗ್, ಪ್ಲಂಬಿಂಗ್ ಮತ್ತು ಎಲೆಕ್ಟ್ರೀಶಿಯನ್ ಮೊದಲಾದ ತರಬೇತಿಗಳನ್ನು ಗ್ರಾಮೀಣ ಯುವಕ ಯುವತಿಯರಿಗಾಗಿ ವಿನ್ಯಾಸಗೊಳಿಸಲಾಗಿದೆ.

ವಿವಿಧ ತರಬೇತಿಗಳಿಗೆ ವಿಷಯತಜ್ಞರು ಮತ್ತು ನುರಿತ ಅನುಭವಿಗಳನ್ನು ಸಂಸ್ಥೆ ಆಯ್ಕೆ ಮಾಡಿ ತರಬೇತಿಗಳ ಜವಾಬ್ದಾರಿಗಳನ್ನು ನೀಡುತ್ತಿದೆ. ಒಂದು ದಿನದ ತರಬೇತಿಯಿಂದ ಹಿಡಿದು 60 ದಿನಗಳ ವರೆಗಿನ ತರಬೇತಿಗಳನ್ನು, ವಿಷಯಕ್ಕೆ ಅನುಸಾರವಾಗಿ ಸಂಸ್ಥೆ ರೂಪಿಸಿದೆ. ಅತ್ಯಂತ ಕಡಿಮೆ ವಂತಿಕೆಯ ಸಂಗ್ರಹಣೆಯ ಮೂಲಕ ಸಂಸ್ಥೆ ಗುಣಮಟ್ಟದ ಕೌಶಲ್ಯವರ್ಧಿತ ತರಬೇತಿಗಳನ್ನು ನೀಡುತ್ತಿದೆ. ತರಬೇತಿಗಳನ್ನು ಆಯೋಜಿಸಲು ಮತ್ತು ಸುಸಜ್ಜಿತವಾಗಿ ಮುನ್ನಡೆಸಲು ಮೂಲಭೂತ ಸೌಕರ್ಯ ಹೊಂದಿರುವ ಸ್ಥಳ ಮತ್ತು ತರಬೇತಿಗೆ ಅಗತ್ಯವಿರುವ ಪೂರಕ ಪರಿಕರಗಳನ್ನು ಕಲ್ಪಿಸಿಕೊಡುವ ವ್ಯವಸ್ಥೆಯನ್ನೂ ಸಂಸ್ಥೆ ಮಾಡುತ್ತದೆ. ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರವನ್ನೂ ಸಹ ನೀಡಲಾಗುತ್ತಿದೆ.

ತರಬೇತಿಯ ನಂತರದ ದಿನಗಳಲ್ಲಿ ಸಂಸ್ಥೆಯು ಫಲಾನುಭವಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅವರಿಗೆ ಅನ್ವಯವಾಗುವ ಸರಕಾರಿ ಸೌಲಭ್ಯಗಳನ್ನು ಒದಗಿಸಿ ಕೊಡುವಲ್ಲಿ ನೆರವಾಗುವುದು, ಮಾತ್ರವಲ್ಲದೆ ಪ್ರಗತಿಮಿತ್ರ ಸೌಹಾರ್ದ ಸಹಕಾರಿಯ ಮೂಲಕ ಸ್ವ–ಉದ್ಯೋಗ ಮಾಡುವ ಉತ್ಸಾಹಿಗಳಿಗೆ ಕಿರು ಸಾಲ ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ. ಸಂಸ್ಥೆಯಿಂದ ಈಗಾಗಲೇ 9872 ಕ್ಕೂ ಹೆಚ್ಚು ಜನರಿಗೆ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಒದಗಿಸಲಾಗಿದೆ. ತರಬೇತಿಗಳನ್ನು ಆಯೋಜಿಸಲು ಹಲವು ದಾನಿ ಸಂಸ್ಥೆಗಳು ಆರ್ಥಿಕ ಸಹಕಾರವನ್ನು ನೀಡಿವೆ.

7....



## ಸಂಪಾದಕೀಯ

ಆತ್ಮೀಯ ಓದುಗರೇ,

ಮನವಿಕಾಸ ಸಂಸ್ಥೆಯು 23 ವಸಂತಗಳನ್ನು ಪೂರೈಸಿ 24ನೇ ವರುಷಕ್ಕೆ ಕಾಲಿರಿಸುತ್ತಿದೆ. ಸಾಮಾಜಿಕ ಕ್ಷೇತ್ರದ ಅಗತ್ಯತೆಗಳಿಗೆ ಅನುಸಾರವಾಗಿ ಕೆಲಸ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದ್ದೇವೆ. ಸಂಸ್ಥೆ ಎಂಬುದು ನದಿ ಇದ್ದಂತೆ, ಆ ನದಿಯಲ್ಲಿ ಹೊಸ ಹೊಸ ಯೋಜನೆಗಳು ಜಾರಿಗೆ ಬಂದು ಅನುಷ್ಠಾನಗೊಂಡು ಜನರನ್ನ ತಲುಪುತ್ತಾ ಇರುತ್ತದೆ.

ಸರ್ಕಾರಿ ಶಾಲೆಗಳು ಎಂದರೆ ಮೂಗು ಮುರಿಯುವವರೆ ಹೆಚ್ಚು. ಎಷ್ಟೋ ಶಾಲೆಗಳು ಅಭಿವೃದ್ಧಿ ವಿಚಾರದಲ್ಲಿ ಸರ್ಕಾರಿ ಇಲಾಖೆಗಳಿಂದ ನಿರ್ಲಕ್ಷಕ್ಕೆ ಒಳಪಟ್ಟು ಹಿಂದುಳಿದಿರುತ್ತದೆ. ಯಲ್ಲಾಪುರ ತಾಲೂಕಿನ ಬೈಚಗೋಡ್ ಹಿರಿಯ ಪ್ರಾಥಮಿಕ ಶಾಲೆಯನ್ನು ಕ್ಲೂಬರ್ ಲ್ಯೂಬ್ರಿಕೇಶನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಇವರ ಸಹಕಾರದೊಂದಿಗೆ ನವೀಕರಿಸಿ, ಅಗತ್ಯ ಕಲಿಕೋಪರಣವನ್ನು ನೀಡಿ ಅಭಿವೃದ್ಧಿಪಡಿಸಲು ಸಂಸ್ಥೆಯು ಮುಂದಾಗಿದೆ.

ಮನುವಿಕಾಸ ಸಂಸ್ಥೆಯು ಸಿ.ಎಂ.ಎಸ್ ಫೌಂಡೇಶನ್ ಸಹಯೋಗದಲ್ಲಿ ಶಿರಸಿ ತಾಲೂಕಿನ ಬನವಾಸಿ ಭಾಗದ ಆಯ್ದ ಶಾಲೆಗಳಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶಾಲೆಯ ನಂತರದ ಅವಧಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸದ ತರಬೇತಿಯನ್ನು ನುರಿತ ಶಿಕ್ಷಕರನ್ನ ನೇಮಿಸಿ ನೀಡುತ್ತಿದೆ. ಇದರಿಂದ ವಿದ್ಯಾರ್ಥಿಗಳ ಶಿಕ್ಷಣ ಮಟ್ಟವನ್ನು ಕೂಡ ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಸಮಗ್ರ ಕೃಷಿ ಯೋಜನೆ ಎಂಬ ಶೀರ್ಷಿಕೆಯ ಅಡಿಯಲ್ಲಿ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಆಯ್ದ 32 ಹಳ್ಳಿಗಳಲ್ಲಿ ಕೃಷಿಗೆ ಸಂಬಂಧಪಟ್ಟಂತಹ ವಿವಿಧ ಯೋಜನೆಗಳನ್ನು ಮನುವಿಕಾಸ ಸಂಸ್ಥೆಯು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಹಯೋಗದೊಂದಿಗೆ ಹಮ್ಮಿಕೊಂಡಿದೆ. ರೈತರ ಕೃಷಿಗೆ ಅನುಕೂಲವಾಗಲು ಕೆರೆಗಳನ್ನು ಹೂಳೆತ್ತುವುದು ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿಕೊಡುವುದು ಜಾನುವಾರುಗಳಿಗೆ ಆರೋಗ್ಯ ತಪಾಸಣೆ ಮಾಡಿಸುವುದು ರೈತರ ಜಮೀನುಗಳನ್ನ ಕಡಿಮೆ ದರದಲ್ಲಿ ಸಮತಟ್ಟುಗೊಳಿಸುವುದು ಅರಣ್ಯ ಕೃಷಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿ ಗಿಡಗಳನ್ನು ವಿತರಿಸುವಂತಹ ಯೋಜನೆಯನ್ನು ಆಯೋಜಿಸಿ ಅನುಷ್ಠಾನಗೊಳಿಸುತ್ತಿದೆ.

ಕೃಷಿಗೆ ಅಗತ್ಯವಿರುವಂತಹ ಜಲ ಸಂರಕ್ಷಣಾ ಕಾರ್ಯ ಸುಧಾರಿತ ಕೃಷಿ, ಸುಸ್ಥಿರ ಕೃಷಿಯ ಕುರಿತಾದಂತಹ ಮಹತ್ವವನ್ನು ರೈತರಿಗೆ ತಿಳಿಸುವಂತಹ ಕಾರ್ಯವನ್ನು ಸಂಸ್ಥೆ ಮಾಡುತ್ತಿದೆ.
“ಕೃಷಿ ಕೃತ್ಯ ಕಾಯಕ ಮಾಡುವ ಸದ್ಭಕ್ತನ ಪಾದಗಳ ತೋರಿಸಿ ಬದುಕಿಸಯ್ಯ
ಆತನ ತನು ಶುದ್ಧ
ಆತನ ಮನ ಶುದ್ಧ
ಆತನ ಭಾವ ಶುದ್ಧ
ಆತನ ಮನೆಯಲ್ಲಿ ಹೊಕ್ಕು ಲಿಂಗಾರ್ಚನೆ ಮಾಡಿದ
ಗುರು ಪಾವನ ನೋಡ ಕೂಡಲಸಂಗಮದೇವ” ಎಂಬ ಬಸವಣ್ಣನವರ ಈ ವಚನದಂತೆ ಮೂರೊತ್ತು ಜಗತ್ತಿಗೆ ಅನ್ನ ನೀಡುವ ಕೃಷಿ ಮಾಡುವ ಕಾಯಕ ಯೋಗಿಯನ್ನು ನಾವು ಸ್ಮರಿಸಲೇಬೇಕಿದೆ.

ಸರಿಸುಮಾರು ಎರಡೂವರೆ ದಶಕಗಳಿಗಿಂತಲೂ ಹೆಚ್ಚು ನಾನು ವಿವಿಧ ಸಂಸ್ಥೆಗಳಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ನನ್ನನ್ನು ನಾನು ತೊಡಗಿಸಿಕೊಂಡಿದ್ದೇನೆ. ಬಡ ಜನರು, ಮಹಿಳೆಯರ, ಹಾಗೂ ರೈತಾಪಿ ವರ್ಗದ ಕಷ್ಟಗಳನ್ನು ಅರಿತು ಜೀವನ ಮಟ್ಟವನ್ನು ಸುಧಾರಿಸಲು ಹಲವು ಯೋಜನೆಗಳನ್ನ ರೂಪಿಸಿ ಅನುಷ್ಠಾನಗೊಳಿಸಲು ಅತ್ಯಂತ ಪ್ರಾಮಾಣಿಕ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ. ಕಳೆದೆರಡು ತಿಂಗಳ ಹಿಂದೆ ಮನುವಿಕಾಸ ಸಂಸ್ಥೆಗೆ ಉತ್ತಮ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆ ಎಂಬ ಪ್ರಶಸ್ತಿಯನ್ನು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು ನೀಡಿ ಗೌರವಿಸಿದೆ. ಅದರೊಟ್ಟಿಗೆ 71ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶಿರಸಿ ತಾಲೂಕ ಆಡಳಿತದಿಂದ ತಾಲೂಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ನನ್ನನ್ನು ಗೌರವಿಸಿರುವುದು ನನ್ನ ಕೆಲಸಕ್ಕೆ ಇನ್ನೂ ಹೆಚ್ಚಿನ ಪುಷ್ಠಿ ಸಿಕ್ಕಂತಾಗಿದೆ.

ಸಂಸ್ಥೆಯ ಸಾಮಾಜಿಕ ಕಾರ್ಯ ಚಟುವಟಿಕೆಗಳಿಗೆ ಶ್ರಮಿಸಿದ ಸಿಬ್ಬಂದಿಗಳಿಗೆ, ಹಿತೈಷಿಗಳಿಗೆ, ನಿರ್ದೇಶಕ ಮಂಡಳಿಯವರಿಗೆ, ಸಲಹಾ ಮಂಡಳಿಯವರಿಗೆ, ಸ್ನೇಹಿತರಿಗೆ ಎಲ್ಲರಿಗೂ ಕೂಡ ನಾನು ಮನಃಪೂರ್ವಕವಾದ ಧನ್ಯವಾದಗಳನ್ನು ತಿಳಿಸುತ್ತೇನೆ.

**ಗಣಪತಿ ಭಟ್ಟ**
ನಿರ್ದೇಶಕರು, ಮನುವಿಕಾಸ



ದಿನಾಂಕ 18–10–2025 ರಂದು ಮನುವಿಕಾಸ ಸಂಸ್ಥೆ ಹಾಗೂ ನಬಾರ್ಡ್ ಇವರ ಸಂಯೋಗದೊಂದಿಗೆ ಡೊಂಗ್ರಿ ಪಂಚಾಯತ್ ಮಳಲಗಾಂವನಲ್ಲಿ ಸ್ವ ಸಹಾಯ ಸಂಘ ಸಭೆ, ಸಿದ್ಧಿಸಿರಿ ಆಡಳಿತ ಸಭೆ, ಅಂತರಾಷ್ಟ್ರೀಯ ಸಹಕಾರಿ ವರ್ಷ 2025, **Vigilance Awereness Campaign** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಹಾಗೂ ಸ್ವಸಹಾಯ ಸಂಘದ ಮಹಿಳೆಯರಿಗೆ ಚಿತ್ರಕಲೆ ಸ್ಪರ್ಧೆ ಹಾಗೂ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೆ ನಬಾರ್ಡ್ ನ **DDM** ಗಳಾದ ಸುಶೀಲ್ ನಾಯ್ಕ ಮನುವಿಕಾಸ ಸಂಸ್ಥೆಯ ಆಪರೇಷನ್ ಹೆಡ್ ಗುರುದಾಸ್ ಪ್ರಭು ಹಾಗೂ ಅಧ್ಯಕ್ಷರಾದ ಭವಾನಿ ರವಿ ಸಿದ್ದಿ ಹಾಗೂ ಸದಸ್ಯರಾದ ಸುಜಾತ ಸಿದ್ದಿ ಉಪಸ್ಥಿತರಿದ್ದರು. ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು ಗುರುದಾಸ್ ಪ್ರಭು ಸಭೆಯ ಕುರಿತು ಮಾತನಾಡಿದರು ಹಾಗೂ ಸುಜಾತ ಸಿದ್ದಿ ಭ್ರಷ್ಟಾಚಾರ ವಿರುದ್ಧ ಧ್ವನಿ ಎತ್ತುವಂತೆ ಸಂಘದ ಮಹಿಳೆಯರಿಗೆ ಕರೆಕೊಟ್ಟರು. ಹಾಗೂ ರಂಗೋಲಿ ಸ್ಪರ್ಧೆ ಹಾಗೂ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸುಶೀಲ್ ನಾಯ್ಕ್ ಇವರು ಬಹುಮಾನಗಳನ್ನು ವಿತರಿಸಿದರು ಮನುವಿಕಾಸ ಸಂಸ್ಥೆಯ ಕ್ಷೇತ್ರ ಸಂಯೋಜಕರಾದ ಶ್ರೀ ಬಾಲಚಂದ್ರ ಗೌಡ ಹಾಗೂ ಗಣಪತಿ ಸಿದ್ದಿ, ಎಂಐಎಸ್ ಅಸಿಸ್ಟೆಂಟ್ ಆದ ಕುಮಾರಿ ಕಾವ್ಯ ಶೇಟ್ ಹಾಗೂ ಸಂಘದ ಮಹಿಳೆಯರು ಉಪಸ್ಥಿತರಿದ್ದರು








# ಮತ್ಸ್ಯಸಿರಿ ಮಹಿಳಾ ಮೀನು ಉತ್ಪಾದಕರ ಮತ್ತು ಮತ್ಸ್ಯೋದ್ಯಮ ಸಂಘ

ಮಹಿಳೆ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಲ್ಲಳು ಎಂಬುದನ್ನು ನಾವು ಸಾವಿರಾರು ಉದಾಹರಣೆಗಳಲ್ಲಿ ನೊಡಿದ್ದೇವೆ. ಹೀಗಿರುವಾಗ ಮಹಿಳೆಯರು ಒಗ್ಗಟ್ಟಾಗಿ ಛಲದಿಂದ ಮುನ್ನಡೆಯುವಾಗ ಸಾಧಿಸುವುದು ಕಷ್ಟದ ಮಾತಲ್ಲ. ಇದಕ್ಕೊಂದು ಉದಾಹರಣೆ ಎಂಬಂತೆ ಇರುವುದು ನಮ್ಮ ಮನುವಿಕಾಸ ಸಂಸ್ಥೆಯ ಸಹಕಾರದಿಂದ ಹುಟ್ಟಿಕೊಂಡಿರುವಂತಹ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಉಪ್ಪುಂದ ಭಾಗದಲ್ಲಿರುವ ಮತ್ಸ್ಯಸಿರಿ ಮಹಿಳಾ ಮೀನು ಉತ್ಪಾದಕರ ಮತ್ತು ಮತ್ಸ್ಯೋದ್ಯಮ ಸಂಘ(ರಿ).

ಮನುವಿಕಾಸ ಸಂಸ್ಥೆಯು ಕುಂದಾಪುರ ತಾಲೂಕಿನಲ್ಲಿ HDFC Parivartan ಸಂಸ್ಥೆ ಸಹಯೋಗದಲ್ಲಿ ಆಯ್ದ 10 ಹಳ್ಳಿಗಳಲ್ಲಿ ಮೀನು ಮಾರಾಟಗಾರ ಮಹಿಳೆಯರಿಗಾಗಿ ಸ್ವ ಸಹಾಯ ಸಂಘಗಳನ್ನು ರಚಿಸಿ ಅವರಿಗೆ ವಿವಿಧ ಸ್ವ ಉದ್ಯೋಗಕ್ಕೆ ಅನುಕೂಲಕರವಾಗುವ ಹಾಗೂ ಮೀನು ಮಾರಾಟಕ್ಕೆ ಅನುಕೂಲವಾಗುವ ಪರಿಕರಗಳನ್ನು ನೀಡಿ ಅವರ ಜೀವನಮಟ್ಟವನ್ನು ಸುಧಾರಿಸಲು ಅನುಕೂಲವಾಗುವಂತೆ ಸಹಕರಿಸಿದೆ.

ಇದರ ಜೊತೆಗೆ ಮೀನುಗಾರ ಕುಟುಂಬಕ್ಕೆ ಇನ್ನೂ ಹೆಚ್ಚಿನ ಸಹಕಾರ ನೀಡುವ ಉದ್ದೇಶದಿಂದ ಒಂದು ಮಹಿಳಾ ರೈತ ಉತ್ಪಾದಕ ಸಂಸ್ಥೆಯನ್ನು ಸ್ಥಾಪಿಸಿದೆ.

ದಿನಾಂಕ 01–02–2024 ರಂದು ಮತ್ಸ್ಯಸಿರಿ ಮಹಿಳಾ ಮೀನು ಉತ್ಪಾದಕರ ಮತ್ತು ಮತ್ಸ್ಯೋದ್ಯಮ ಸಂಘವನ್ನು ನೋಂದಣಿ ಮಾಡಲಾಯಿತು. ಸ್ವಸಹಾಯ ಸಂಘದ ಮಹಿಳೆಯರು ಹಾಗೂ ಅನೇಕ ಮೀನುಗಾರ ಮಹಿಳೆಯರು ಸಂಘದ ಸದಸ್ಯರಾದರು. ಸಂಘವು ಕೇವಲ ಒಂದುವರೆ ವರ್ಷದಲ್ಲಿ 506 ಶೇರುಸದಸ್ಯರನ್ನು ಹೊಂದಿದ್ದು, ತನ್ನದೇ ಸ್ವಂತ ಅಂಗಡಿಯನ್ನು ಸಹ ಆರಂಭಿಸಿದೆ. ನಬಾರ್ಡ ಕೂಡಾ ಈ ಸಂಘದ ಜೊತೆ ಕೈ ಜೋಡಿಸಿ ಆರ್ಥಿಕ ಸಹಕಾರವನ್ನು ನೀಡಿದೆ.

ಕೇವಲ ಮಹಿಳಾ ಸದಸ್ಯರೇ ಸೇರಿ ಆರಂಭಿಸಿರುವ ಈ ಸಂಸ್ಥೆಯಲ್ಲಿ 506 ಮಹಿಳಾ ಸದಸ್ಯರು ಹಾಗೂ ಎಲ್ಲಾ ನಿದೇಶಕ ಮಂಡಳಿ ಸದಸ್ಯರೂ ಸಹ ಮಹಿಳೆಯರೇ ಆಗಿದ್ದಾರೆ. ಎಲ್ಲಾ ವ್ಯವಹಾರಗಳನ್ನು ಸಹ ಮಹಿಳೆಯರೇ ನಿರ್ವಹಿಸುತ್ತಿದ್ದು, ಉತ್ತಮವಾಗಿ ವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಜೊತೆಗೆ ಇಬ್ಬರು ಮಹಿಳೆಯರಿಗೆ ಅಂಗಡಿಯಲ್ಲಿ ಉದ್ಯೋಗವನ್ನೂ ಸಹ ನೀಡಿದ್ದಾರೆ.

ವಿಶೇಷವೆನೆಂದರೆ ಕೇವಲ ಒಂದೇ ವರ್ಷದಲ್ಲಿ ಉತ್ತಮವಾಗಿ ವ್ಯವಹರಿಸಿ ಎಲ್ಲಾ ಶೇರು ಸದಸ್ಯರಿಗೆ ತಮ್ಮ ವಾರ್ಷಿಕ ಸಭೆಯಲ್ಲಿ ಲಾಭದ ಡಿವಿಡೆಂಡ್ ನೀಡಿದ್ದಾರೆ.





# ಕೃಷಿಯೊಂದಿಗೆ ಗೋ ಸೇವೆಯು ನಿರಂತರ

ಹೈನುಗಾರಿಕೆಯು ಪುಣ್ಯದ ಹಾಗೂ ಲಾಭದಾಯಕ ಕಸುಬಾದರೂ ಕೂಡಾ ಇಂದಿನ ವರ್ತಮಾನದಲ್ಲಿ ಆಸಕ್ತಿ ವಹಿಸಿ ಹೈನುಗಾರಿಕೆಯನ್ನು ಮಾಡುವವರ ಸಂಖ್ಯೆ ಹಳ್ಳಿಗಳಲ್ಲಿ ಕಡಿಮೆ ಇದೆ. ಹತ್ತಿರದ ಡೈರಿಯಿಂದಲೋ ಅಥವಾ ಅಂಗಡಿಯಲ್ಲಿ ದೊರೆಯುವ ಪ್ಯಾಕೆಟ್ ಹಾಲನ್ನು ಖರೀದಿಸಿ ಜೀವನ ನಡೆಸುವಂತಹ ಹಳ್ಳಿಗರನ್ನು ಹಲವು ಕಡೆಗಳಲ್ಲಿ ಕಾಣಬಹುದು.

ಇಂಜಿನಿಯರಿಂಗ್‌ನಂತಹ ಉನ್ನತ ಶಿಕ್ಷಣವನ್ನು ಪಡೆದು ಮಲೆನಾಡಿನ ಹಳ್ಳಿಯಲ್ಲಿ ರೈತ ಉತ್ಪಾದಕ ಕಂಪನಿಯನ್ನು ಕಟ್ಟಿ, ಸಾಧನೆಯ ಮೂಲಕ ದಿಲ್ಲಿಯವರೆಗೂ ಕೂಡ ಸದ್ದು ಮಾಡಬಹುದು ಎಂಬುದನ್ನು ತೋರಿಸಿಕೊಟ್ಟವರಲ್ಲಿ ಶಿರಸಿ ತಾಲೂಕಿನ ಕೆಂಗ್ರೆ ಹೊಳೆಯ ಬಾಳೆಗದ್ದೆ ಗ್ರಾಮದ ವಿವೇಕ್ ಅನಂತ ಹೆಗಡೆಯವರು ಉತ್ತಮ ನಿದರ್ಶನವಾಗಿದ್ದಾರೆ.

## ಹೈನುಗಾರಿಕಾ ರೈತ ಉತ್ಪಾದಕ ಕಂಪನಿಯ ಪರಿಕಲ್ಪನೆ ಹೇಗೆ?

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಹಾಗೂ ವಿವೇಕ್ ಹೆಗಡೆಯವರು ಸರಿಸುಮಾರು ಹತ್ತು ವರ್ಷಗಳ ಹಿಂದೆಯೇ ಪ್ರಗತಿ ಮಿತ್ರ ಎಂಬ ರೈತ ಉತ್ಪಾದಕ ಕಂಪನಿಯನ್ನು ಸ್ಥಾಪಿಸಿ ಮಲೆನಾಡಿನ ಅಡಿಕೆ ಬೆಳೆಗಾರರಿಗೆ ಅನುಕೂಲವಾಗಲು ಅಡಿಕೆ ಸಂಸ್ಕರಣಾ ಕಾರ್ಯವನ್ನು ಆರಂಭಿಸಿಕೊಂಡು ಬಂದಿದ್ದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಗತಿಮಿತ್ರ ರೈತ ಉತ್ಪಾದಕ ಸಂಸ್ಥೆಯು ಗುರುತಿಸಿಕೊಂಡು ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ.

ಮಲೆನಾಡು ಭಾಗದ ಅನೇಕ ಮನೆಗಳಲ್ಲಿ ಯುವಕರು ಉದ್ಯೋಗವನ್ನು ಅರಸಿಕೊಂಡು ಹಳ್ಳಿಯನ್ನು ಬಿಟ್ಟು ದೂರದ ಬೆಂಗಳೂರು, ಮೈಸೂರು, ಮುಂಬೈ, ಪುಣೆ ಹಾಗೂ ಬೇರೆ ಬೇರೆ ದೇಶಗಳಿಗೆ ತೆರಳಿದ್ದಾರೆ. ಹಳ್ಳಿಯಲ್ಲಿ ಕೃಷಿಯ ಮೇಲಿನ ಪ್ರೀತಿಯಿಂದ ವಯಸ್ಸಾದ ತಂದೆ ತಾಯಿಗಳು ತೋಟಗಳನ್ನು ನೋಡಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಕೊಟ್ಟಿಗೆ ನಿರ್ವಹಣೆ ಮಾಡಲು ಆಸಕ್ತಿ ಇದ್ದರೂ ಶಕ್ತಿ ಇಲ್ಲದ ಪರಿಸ್ಥಿತಿ ಅವರದಾಗಿದೆ. ಮೇವಿನ ಸಮಸ್ಯೆ ಒಂದೆಡೆಯಾದರೆ, ದನ ಕರುಗಳ ಸಾಕಾಣಿಕೆಯಲ್ಲಿ ಇನ್ನೂ ಕೆಲವರಿಗೆ ಆಸಕ್ತಿ ಕಡಿಮೆಯಾಗಿರುವುದರಿಂದ ಮಲೆನಾಡು ಭಾಗಗಳಲ್ಲಿ ದನ ಕರುಗಳನ್ನು ಸಾಕಾಣಿಕೆ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಕುಂದುತ್ತಿದೆ.

ವಿವೇಕ್ ಹೆಗಡೆಯವರ ಅಜ್ಜಿ ನೇತ್ರಾವತಿ ಹೆಗಡೆಯವರಿಗೆ ದನ ಕರುಗಳನ್ನು ಸಾಕುವುದೆಂದರೆ ಅತೀವ ಆಸಕ್ತಿ. ಕೊಟ್ಟಿಗೆಯಲ್ಲಿ ಎಮ್ಮೆ, ಆಕಳು, ಹೋರಿ ಕರುಗಳೆಲ್ಲವೂ ಸೇರಿ 50 ಕಾಲುನಡಿಗೆ ಆಗುತ್ತಿದ್ದವಂತೆ. ನೇತ್ರಾವತಿ ಹೆಗಡೆಯವರ ಕಾಲಾನಂತರದಲ್ಲಿ ಕಾರಣಾಂತರದಿಂದ ಕೊಟ್ಟಿಗೆ ಕೆಲಸವನ್ನು ಕಡಿಮೆ ಮಾಡಲಾಯಿತು. ಇಂದಿನ ಹಳ್ಳಿಗಳ ಹೈನಿನ ಪರಿಸ್ಥಿತಿಯನ್ನು ಮನಗಂಡು ವಿವೇಕ್ ಹೆಗಡೆಯವರು ತಮ್ಮ ಮನೆಯ ಜಾಗದಲ್ಲಿಯೇ ಕೃಷಿ ನಿರಂತರ ಎಂಬ ರೈತ ಉತ್ಪಾದಕ ಕಂಪನಿಯ ಹಸುಗಳ ಸಾಕಾಣಿಕೆಯ ಡೈರಿಯನ್ನು ಆರಂಭಿಸಿ ಗೋ ಸೇವೆಯ ಪುಣ್ಯದ ಕೆಲಸವನ್ನು ಮಾಡುತ್ತಿದ್ದಾರೆ.



## ಅನುಭವಿ ವೈದ್ಯರು ನಿರಂತರವಾಗಿ ಲಭ್ಯರಿದ್ದಾರೆ

ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಗೆ ರಾಮಚಂದ್ರ ಹೆಗಡೆ ( ಆರ್.ಎಸ್.ಹೆಗಡೆ) ಕೆಎಂಎಫ್ ನ ಜನಪ್ರಿಯ ವೈದ್ಯರ ಸಹಾಯ ಸಹಕಾರದ ಜೊತೆಯಲ್ಲಿ ಮಾರ್ಗದರ್ಶನವಿದೆ. ರೈತರ ರಾಸುಗಳಿಗೆ ಔಷಧೋಪಚಾರವನ್ನು ರಾಮಚಂದ್ರ ಹೆಗಡೆಯವರು ಮಾಡುತ್ತಿದ್ದಾರೆ. ಜಾನುವಾರಗಳಿಗೆ ಯಾವುದೇ ಬಗೆಯ ಖಾಯಿಲೆಗಳು ಬಂದರೂ ಸಹ ಆರ್ ಎಸ್ ಹೆಗಡೆಯವರು ನೀಡುವ ಔಷಧಗಳು ರಾಮಬಾಣವಾಗಿ ಪರಿಣಮಿಸಿ ನಿವಾರಣೆಗೊಳ್ಳುತ್ತಿದೆ.






## ಪಶು ದವಾಖಾನೆ ಸ್ಥಾಪನೆ

ಶಿರಸಿಯಿಂದ ಯಲ್ಲಾಪುರಕ್ಕೆ ಸಾಗುವ ಮುಖ್ಯ ರಸ್ತೆಯಲ್ಲಿ ಅಂಬೇಡ್ಕರ್ ಭವನದ ಎದುರಿನಲ್ಲಿ ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಯು ಜಾನುವಾರುಗಳಿಗೆ ಅಗತ್ಯವಿರುವ ಔಷಧಗಳು, ಮೇವುಗಳನ್ನು ಒಳಗೊಂಡ ಪಶು ದವಾಖಾನೆಯನ್ನು ಆರಂಭಿಸಿದೆ. ನಾಯಿ–ಬೆಕ್ಕುಗಳಂತಹ ಸಾಕುಪ್ರಾಣಿಗಳ ಖಾಯಿಲೆಗಳಿಗೂ ಸಹ ಇಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಭಾರತೀಯ ಸೇನೆಯಲ್ಲಿ ಒಂದುವರೆ ದಶಕಗಳಿಗಿಂತಲೂ ಹೆಚ್ಚು ಪ್ರಾಣಿಗಳ ಶುಶ್ರೂಷೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಸುಬೇದಾರ್ ಮಾರುತಿಯವರು ಚಿಕಿತ್ಸಕರಾಗಿ ದವಾಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

## ದೇಸಿ ತಳಿಯ ಹಸುಗಳಿವೆ ನೇತ್ರಾವತಿ ಡೈರಿಯಲ್ಲಿ

ನಮ್ಮ ದೇಶದಲ್ಲಿ ಹತ್ತಾರು ಬಗೆಯ ವಿವಿಧ ತಳಿಯ ಜಾನುವಾರುಗಳನ್ನು ಆಯಾ ಭೌಗೋಳಿಕ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ಎಲ್ಲಾ ವಾತಾವರಣಗಳಿಗೂ ಒಗ್ಗಿಕೊಂಡು ತನ್ನ ಪಾಲನೆ ಮಾಡುವ ಪಾಲಕರನ್ನು ಪ್ರೀತಿಸಿಕೊಂಡು ಅತ್ಯುತ್ತಮ ಪೌಷ್ಟಿಕ ಗುಣಮಟ್ಟದ ಹಾಲನ್ನು ದೇಸಿ ತಳಿಯ ಹಸುಗಳು ನೀಡುತ್ತವೆ. ಮಾರುಕಟ್ಟೆಯಲ್ಲಿ ದೇಸಿ ತಳಿ ಹಸುವಿನ ಹಾಲನ್ನು **A2** ಮಿಲ್ಕ್ ಎಂದು ಪರಿಗಣಿಸಲಾಗಿದೆ. ನೇತ್ರಾವತಿ ಡೈರಿಯಲ್ಲಿ ಗುಜರಾತಿನ ಗೀರ್, ಥಾರ್ ಪಾರ್ಕರ್ ನಂತಹ ವಿಶೇಷ ದೇಸಿ ತಳಿಯ ಹಸುಗಳನ್ನು ಒಳಗೊಂಡು ಹತ್ತಕ್ಕೂ ಹೆಚ್ಚಿನ ಜರ್ಸಿ ತಳಿಯ ಹಸುಗಳು ಕೂಡ ಇವರ ಕೊಟ್ಟಿಗೆಯಲ್ಲಿ ಸಮೃದ್ಧವಾಗಿದೆ. ಅವುಗಳ ಹಾಲು ಕೃಷಿ ನಿರಂತರ ಪಶು ದವಾಖಾನೆಯಲ್ಲಿ ಲಭ್ಯವಿದೆ.

## ಆಧುನಿಕ ಪರಿಕಲ್ಪನೆಯ Cow Lodging

ಮಗನ ಅಥವಾ ಮಗಳ ಮನೆಗೆ ಬೆಂಗಳೂರಿಗೆ ಅಪರೂಪಕ್ಕೆ ಹೋಗಬೇಕೆಂದಾಗ ಪೋಷಕರು ಕೊಟ್ಟಿಗೆಯಲ್ಲಿನ ದನ ಕರುಗಳನ್ನು ನೋಡಿಕೊಳ್ಳಲು ಸಂಬಂಧಿಕರನ್ನು ಬಿಟ್ಟು ಹೋಗಬೇಕು ಅಥವಾ ದನ ಕರುಗಳನ್ನು ಮನಸ್ಸಿಲ್ಲದ ಮನಸ್ಸಿನಿಂದ ಮಾರಿ ಹೋಗಬೇಕು. ಅದು ರೈತರಿಗೂ ಮನಸ್ಸಿಗೆ ನೋವೆನಿಸುತ್ತದೆ. ಹಾಗಾಗಿ ಆ ಸಮಸ್ಯೆಯನ್ನು ತಪ್ಪಿಸಲು ಕೃಷಿ ನಿರಂತರದ ನೇತ್ರಾವತಿ ಡೈರಿಗೆ ಹಸುವನ್ನು ತಂದು ಬಿಡಬಹುದು, ಅಲ್ಲಿ ಸಂಪೂರ್ಣ ನಿರ್ವಹಣೆ ಮಾಡಲಾಗುತ್ತದೆ. ರೈತರು ಪ್ರವಾಸ ಮುಗಿಸಿ ಬಂದ ನಂತರ ನಿರ್ವಹಣಾ ವೆಚ್ಚವನ್ನು ಪಾವತಿಸಿ ಪುನಃ ತಮ್ಮ ಕೊಟ್ಟಿಗೆಗೆ ತಮ್ಮ ದನ ಕರುವನ್ನು ಕರೆದೊಯ್ಯಬಹುದಾಗಿದೆ ಎಂದು ಕೃಷಿ ನಿರಂತರದ ಮುಖ್ಯ ಕಾರ್ಯನಿರ್ವಾಹಕ ಪ್ರಜ್ವಲ್ ಹೆಗಡೆ ತಿಳಿಸಿದ್ದಾರೆ.

ಹೈನುಗಾರಿಕೆಯಲ್ಲಿ ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಯು ಹೊಸ ಹೆಜ್ಜೆಯನ್ನಿಟ್ಟಿದೆ, ಆಸಕ್ತ ರೈತರು ಅದರ ಸದುಪಯೋಗವನ್ನು ಪಡೆದುಕೊಂಡು ತಮ್ಮ ಆದಾಯವನ್ನು ವೃದ್ಧಿಸಿಕೊಳ್ಳಬೇಕಿದೆ.





ಪುಟಸಂಖ್ಯೆ 1...ರಿಂದ

# ಕೌಶಲ್ಯ ತರಬೇತಿ ಪಡೆದವರ ವಿವರ

| ಕ್ರ.ಸಂ. | ತರಬೇತಿ | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಸುಸ್ಥಿರ ಕೃಷಿ ತರಬೇತಿ | 2412 |
| 2 | ಹೈನುಗಾರಿಕೆ ತರಬೇತಿ | 1846 |
| 3 | ಬ್ಯುಟಿಶಿಯನ್ ತರಬೇತಿ | 335 |
| 4 | ಕೇಟರಿಂಗ್ ತರಬೇತಿ | 644 |
| 5 | ಡ್ರೈವಿಂಗ್ ತರಬೇತಿ | 20 |
| 6 | ಡಿಜಿಟಲ್ ಸಾಕ್ಷರತೆ ತರಬೇತಿ | 986 |
| 7 | ಕಛೇರಿ ಮತ್ತು ಲೆಕ್ಕಪತ್ರ ನಿರ್ವಹಣೆ ತರಬೇತಿ | 110 |
| 8 | ಫೋಟೊಗ್ರಾಫಿ ಮತ್ತು ವಿಡಿಯೊಗ್ರಾಫಿ ತರಬೇತಿ | 25 |
| 9 | ಶಾಪ್‌ಕೀಪಿಂಗ್ ಮತ್ತು ರಿಟೈಲ್ ಮಾರ್ಕೆಟಿಂಗ್ ತರಬೇತಿ | 60 |
| 10 | ವಿಡಿಯೋ ಎಡಿಟಿಂಗ್ ತರಬೇತಿ | 19 |
| 11 | ಸುಧಾರಿತ ಹೊಲಿಗೆ ತರಬೇತಿ | 200 |
| 12 | ಸಾಮಾನ್ಯ ಹೊಲಿಗೆ ತರಬೇತಿ | 2078 |
| 13 | ಕಂಪ್ಯೂಟರ್ ತರಬೇತಿ | 273 |
| 14 | ಬೀಜ ಸಂರಕ್ಷಣೆ / ಬೀಜ ಬ್ಯಾಂಕಿಂಗ್ ತರಬೇತಿ | 160 |
| 15 | ಕಿಚನ್‌ಗಾರ್ಡನ್ ತರಬೇತಿ | 150 |
| 16 | ಭತ್ತದಲ್ಲಿ ಶ್ರೀ ಪದ್ಧತಿ ತರಬೇತಿ | 203 |
| 26 | ಆತಿಥ್ಯ ನಿರ್ವಹಣೆ ತರಬೇತಿ | 71 |
| 27 | ನಾಯಕತ್ವ ನಿರ್ವಹಣೆ ತರಬೇತಿ | 120 |
| 28 | ಮಣ್ಣು ಸಂರಕ್ಷಣೆ ಮತ್ತು ಸಾವಯವ ಕೃಷಿ ತರಬೇತಿ | 80 |
| 29 | ಕೋಳಿ ಮರಿಗಳು ಮತ್ತು ಜೇನು ಸಾಕಾಣಿಕೆ ತರಬೇತಿ | 80 |
| | ಒಟ್ಟೂ ಫಲಾನುಭವಿಗಳ ಸಂಖ್ಯೆ | 9872 |

ಕೌಶಲ್ಯಾಧಾರಿತ ತರಬೇತಿ ಪಡೆದ ಫಲಾನುಭವಿಗಳು ಕಿರು ಅಂಗಡಿ ವ್ಯಾಪಾರ, ಕಂಪ್ಯೂಟರ್ ಸೆಂಟರ್, ಹೊಲಿಗೆ ಅಂಗಡಿ, ಬ್ಯೂಟೀಶಿಯನ್ ಸೆಂಟರ್, ಕೋಳಿ ಮತ್ತು ಕುರಿ ಸಾಕಣೆ, ಹೊಟೆಲ್ ಉದ್ಯಮ, ಹೈನುಗಾರಿಕೆ, ತರಕಾರಿ ವ್ಯಾಪಾರ ಮೊದಲಾದ ಕ್ಷೇತ್ರಗಳಲ್ಲಿ ಈಗಾಗಲೇ ನೆಲೆಯನ್ನು ಕಂಡುಕೊಂಡಿದ್ದಾರೆ. ಸಾಮಾಜಿಕ ಕ್ಷೇತ್ರದಲ್ಲಿಯೂ ನಾಯಕತ್ವ ನಿರ್ವಹಣೆಯಲ್ಲೂ ಹಿಂದೆ ಬಿದ್ದಿಲ್ಲ. ಹಲವು ಮಹಿಳಾ ರೈತ ಉತ್ಪಾದಕ ಸಂಘಗಳ ನಿರ್ಮಾಣದ ಮೂಲಕವೂ ಹೊಸ ಸುಸಂಘಟಿತ ಆಯಾಮಕ್ಕೆ ಮುನ್ನುಡಿ ಬರೆದ ಮಹಿಳೆಯರೂ ಇದರಲ್ಲಿ ಸೇರಿದ್ದಾರೆ.














# ಪರ್ಯಾಯ ಜೀವನೋಪಾಯ ನಿರ್ವಹಣೆಗಾಗಿ ನೀಡಲಾದ ಸೌಲಭ್ಯಗಳು

| ಅ.ಸಂ. | ಸೌಲಭ್ಯಗಳ ವಿವರ | ಫಲಾನುಭವಿಗಳ ಸಂಖ್ಯೆ |
|---|---|---|
| 1 | ಕೋಳಿ ಮರಿ ವಿತರಣೆ | 1092 |
| 2 | ಜೇನು ಪೆಟ್ಟಿಗೆ ವಿತರಣೆ | 377 |
| 3 | ಬಿಸಿನೆಸ್ ಅಸಿಸ್ಟೆನ್ಸ್ | 182 |
| 4 | ಫಿಶ್ ಬಾಕ್ಸ್ ವಿತರಣೆ | 77 |
| 5 | ಡೀಪ್ ಫ್ರೀಜರ್ ವಿತರಣೆ | 5 |
| 6 | ಕೇಜ್ ಫಿಶಿಂಗ್ | 5 |
| 7 | ಒಣ ಮೀನು ಗೂಡು ವಿತರಣೆ | 20 |
| 8 | ಸ್ಟ್ರೀಟ್ ಫುಡ್ ಸ್ಟಾಲ್ | 13 |
| 9 | ತೋಟಗಾರಿಕಾ ಉಪಕರಣಗಳು | 148 |
| 10 | ಸಾವಯವಗೊಬ್ಬರ ಮತ್ತು ಬೀಜ ವಿತರಣೆ | 70 |
| 11 | ಸೋಲಾರ್ ಲೈಟ್ ವಿತರಣೆ | 25 |
| 12 | ಎರೆಹುಳು ತೊಟ್ಟಿ ಮತ್ತು ಎರೆಹುಳು ಘಟಕಗಳ ವಿತರಣೆ | 25 |
| 13 | ಹೊಗೆ ರಹಿತ ಒಲೆಗಳ ವಿತರಣೆ | 25 |
| | ಒಟ್ಟೂ ಫಲಾನುಭವಿಗಳ ಸಂಖ್ಯೆ | 2064 |

ಒಟ್ಟಾರೆಯಾಗಿ ಸಂಸ್ಥೆಯು ಗ್ರಾಮೀಣ ಸಮುದಾಯದ ಅದರಲ್ಲೂ ಮಹಿಳೆಯರ ಆರ್ಥಿಕ ಅಭಿವೃದ್ಧಿ ಮತ್ತು ಪರ್ಯಾಯ ಜೀವನೋಪಾಯ ನಿರ್ವಹಣೆಗಾಗಿ ಅವಿರತ ಶ್ರಮ ವಹಿಸುತ್ತಿದೆ. ಮುಂಬರುವ ದಿನಗಳಲ್ಲಿ ಹೊಸ ಕ್ಷೇತ್ರಗಳಲ್ಲಿ ಈ ಯೋಜನೆಗಳ ಜೊತೆಗೆ ಇನ್ನೂ ಹಲವಾರು ವಿನೂತನ ಯೋಜನೆಗಳನ್ನು ಜಾರಿಗೆ ತರುವ ಮತ್ತು ಇನ್ನಷ್ಟು ಮಹಿಳೆಯರನ್ನು ತಲುಪುವ ಉದ್ದೇಶವನ್ನು ಸಂಸ್ಥೆ ಹೊಂದಿದೆ.











# ಸಂಸ್ಥೆಯಿಂದ ಗ್ರಾಮೀಣ ಸಮುದಾಯಕ್ಕಾಗಿ 'ಜಲ ಕೃಷಿ ಸಂಮೃದ್ಧಿ ಯೋಜನೆ' ಹಾಗೂ ನಾರಿ ಶಕ್ತಿ ಗ್ರೀನ್ ವೇ' ಯೋಜನೆಗಳ ಅನುಷ್ಠಾನ

ಮನುವಿಕಾಸ ಸಂಸ್ಥೆಯು ಇತ್ತೀಚೆಗೆ 'ಜಲ ಕೃಷಿ ಸಂಮೃದ್ಧಿ ಯೋಜನೆ' ಎನ್ನುವ ವಿನೂತನ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಅದರೊಂದಿಗೆ 'ನಾರಿ ಶಕ್ತಿ ಗ್ರೀನ್ ವೆ' ಎನ್ನುವ ಮಹಿಳಾ ಕೃಷಿಕರಿಗೆ ಉತ್ತೇಜನ ನೀಡುವ 'ಯೋಜನೆಯನ್ನು ಕೂಡ ಉತ್ತರಕನ್ನಡ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳಲಿ ಅನುಷ್ಠಾನಗೊಳಿಸಲಾಗುತ್ತಿದೆ

ಜಲ ಕೃಷಿ ಸಂಮೃದ್ಧಿ ಅಭಿಯಾನದ ಅಡಿಯಲ್ಲಿ ಈ ಗಾಗಲೇ ಕಲಘಟಗಿ ತಾಲೂಕಿನ ಆಯ್ದ 32 ಹಳ್ಳಿಗಳನ್ನು ಆಯ್ಕೆ ಮಾಡಿ ಕೆಲಸ ಪ್ರಾರಂಭಿಸಲಾಗಿದೆ. 'ನಾರಿ ಶಕ್ತಿ ಗ್ರೀನ್ ವೇ' ಯೋಜನೆಯ ಅಡಿಯಲ್ಲಿ ಮೂರು ಜಿಲ್ಲೆಗಳಲ್ಲಿ 20000ಕ್ಕೂ ಹೆಚ್ಚು ಕೃಷಿ ಮಹಿಳೆಯರೊಂದಿಗೆ ಕೆಲಸ ನಿರ್ವಹಿಸಲಾಗುತ್ತಿದೆ.

ಸಣ್ಣ ಮತ್ತು ಅತೀ ಸಣ್ಣ ಹಿಡುವಳಿ ಹೊಂದಿರುವ ರೈತಾಪಿ ಸಮುದಾಯಕ್ಕಾಗಿ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ, ಕೃಷಿ ಹೊಂಡ ನಿರ್ಮಾಣ, ನಿರಂತರವಾದ ಗ್ರಾಮ ಮಟ್ಟದ ಜಾಗೃತಿ ಸಭೆಗಳು, ಸುಸ್ಥಿರ ಕೃಷಿ ತರಬೇತಿ, ಕ್ಷೇತ್ರಅಧ್ಯಯನ, ಕೃಷಿ / ವ್ಯವಸಾಯದ ಪ್ರಾಯೋಗಿಕ ಕ್ಷೇತ್ರ ನಿರ್ಮಾಣ, ಮಹಿಳೆಯರಿಗಾಗಿ ಕೈತೋಟ ನಿರ್ವಹಣೆ ತರಬೇತಿ ಮತ್ತು ಪ್ರಾತ್ಯಕ್ಷಿಕತೆ, ಜಾನುವಾರುಗಳ ವೈದ್ಯಕೀಯ ತಪಾಸಣಾ ಶಿಬಿರಗಳ ಆಯೋಜನೆ. ಗ್ರಾಮೀಣಾಭಿವೃದ್ಧಿಯ ಜಾಗೃತಿಯ ಗೋಡೆ ಬರಹಗಳು, ಬತ್ತಿದ ಕೊಳವೆ ಬಾವಿ ಮರುಪೂರಣ, ತೋಟಗಾರಿಕಾ ಬೆಳೆಗಳಿಗೆ ಉತ್ತೇಜನ, ಮಹತ್ಮಾಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಮೂಲಕ ಗ್ರಾಮೀಣ ಮಟ್ಟದಲ್ಲಿ ಉದ್ಯೋಗ ಸೃಷ್ಠಿ ಮತ್ತು ಪರ್ಯಾಯ ಜೀವನೋಪಾಯ ನಿರ್ವಹಣೆಗಾಗಿ ಪ್ರಗತಿಪರ ಯೋಜನೆಗಳನ್ನು ರೂಪಿಸಿದೆ.

ಯೋಜನೆಗಳಿಗೆ ಪೂರಕವಾಗಿ ಸರಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಸಮುದಾಯಕ್ಕೆ ತಲುಪಿಸುವ ಹೊಣೆಗಾರಿಕೆಯನ್ನು ಸಂಸ್ಥೆ ವಹಿಸಿದೆ. ಈ ಎಲ್ಲರೈತ ಸ್ನೇಹೀ ಯೋಜನೆಗಳಿಂದ ನೇರವಾಗಿ 30000 ಕುಟುಂಬಗಳನ್ನು ತಲುಪಿ ಅವರ ಆರ್ಥಿಕ ಸ್ವಾವಲಂಬನೆಯನ್ನು ರೂಪಿಸುವ ಮತ್ತು ಮುಂಬರುವ ದಿನಗಳಲ್ಲಿ ಬೇರೆ ತಾಲೂಕುಗಳಿಗೆ ಈ ಯೋಜನೆಯನ್ನು ವಿಸ್ತರಿಸುವ ಗುರಿಯನ್ನು ಸಂಸ್ಥೆ ಹೊಂದಿದೆ.






## ತಳವಾರಕೆರೆ ಪುನಶ್ಚೇತನ ಸುಸ್ಥಿರ ಕೃಷಿಯತ್ತ ಸಮುದಾಯದ ಪಯಣ









ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಚನ್ನಳ್ಳಿ ಗ್ರಾಮವು ಮುಖ್ಯವಾಗಿ ಕೃಷಿ ಆಧಾರಿತ ಗ್ರಾಮವಾಗಿದೆ. ಈ ಪ್ರದೇಶದಲ್ಲಿ ಮೆಕ್ಕೆಜೋಳ ಪ್ರಮುಖ ಬೆಳೆ ಆಗಿದ್ದು, ಹತ್ತಿ, ಭತ್ತ, ಬೇಳೆ ಮತ್ತು ಎಣ್ಣೆಬೀಜಗಳನ್ನು ಸಹ ಬೆಳೆಯಲಾಗುತ್ತದೆ. ವರ್ಷಕ್ಕೆ ಸರಾಸರಿ 700–750 ಮಿ.ಮೀ ಮಳೆಯಿದ್ದರೂ ಬರಗಾಲ, ಅಸ್ಥಿರಮಳೆಹಾಗೂಅಂತರ್ಜಲ ಕುಸಿತದಿಂದ ರೈತರು ತೀವ್ರ ಜಲಸಂಕಷ್ಟವನ್ನು ಎದುರಿಸುತ್ತಿದ್ದಾರೆ. ರೈತರ ಜಮೀನಿನಲ್ಲು ಅನೇಕಬೋರ್‌ವೆಲ್‌ಗಳು ಒಣಗಿಹೋಗಿರುವುದರಿಂದ ರೈತರು ಮಳೆಯ ನೀರಿನ ಮೇಲೂ ಹಾಗೂ ಕೆರೆಗಳ ಮೇಲೂ ಅವಲಂಬಿತರಾಗಿದ್ದಾರೆ.

### ತಳವಾರ ಕೆರೆ ಹೇಗಿತ್ತು ಗೊತ್ತಾ ?

ಚನ್ನಳ್ಳಿ ಗ್ರಾಮದ ಸರ್ವೆ ನಂ. 43 ರಲ್ಲಿನ ತಳವಾರಕೆರೆ 03.36.00 ಎಕರೆ ವಿಸ್ತೀರ್ಣ ಹೊಂದಿದ್ದು, ಈ ಕೆರೆಯು ಬೇಸಾಯಕ್ಕೆ ಪ್ರಮುಖ ಜಲ ಮೂಲವಾಗಿತ್ತು. ಆದರೆ ಬಹಳ ವರ್ಷಗಳಿಂದ ಕೆರೆಯಲ್ಲಿ ಹೂಳು ತುಂಬಿಕೊಂಡು ನೀರು ಹಿಡಿದಿಡುವ ಸಾಮರ್ಥ್ಯವನ್ನು ಕಡಿಮೆ ಆಗಿತ್ತು. ಮಳೆಗಾಲದ ನಂತರವೂ ಕೆರೆಯಲ್ಲಿ ನೀರು ಬೇಗನೆ ಒಣಗುತ್ತಿದ್ದು, ಬೇಸಿಗೆಯಲ್ಲಿ ಕೃಷಿ ಮತ್ತು ದನಕರುಗಳಿಗೆ ನೀರು ಲಭ್ಯವಿರಲಿಲ್ಲ. ಜೊತೆಗೆ ಕೆರೆಯ ಸುತ್ತಲಿನ ಬೋರ್‌ವೆಲ್‌ಗಳಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿತ್ತು. ಹೂಳು ತುಂಬಿದ್ದ ಕೆರೆಯಿಂದ ಕೃಷಿಗೆ ಹೆಚ್ಚಿನ ಅನುಕೂಲತೆಯು ಲಭ್ಯವಿರಲಿಲ್ಲ. ಮುಂಗಾರಿನ ಸಮಯದಲ್ಲಿ ಬಿತ್ತನೆ ಮಾಡಿದ ಬೆಳೆಗಳಿಗೆ ಔಷಧ ಸಿಂಪಡಣೆಗೆ ರೈತರು ಟ್ಯಾಂಕರ್‌ನಲ್ಲಿ ನೀರನ್ನು ಹೊತ್ತು ತರುವ ದೃಶ್ಯ ಕಂಡು ಬರುತ್ತಿತ್ತು. ಮಳೆಗಾಲದ ಸಮಯದಲ್ಲಿ ನೀರಿನ ಗಾಡಿಗಳ ಓಡಾಟ ಅಲ್ಲಿಯ ನೀರಿನ ಬವಣೆಯನ್ನು ಸಾಕ್ಷಿಕರಿಸುತ್ತದೆ.

### ಕೆರೆಗೆ ಪುನರುಜ್ಜೀವನದ ಕಾಯಕಲ್ಪ

ಪುನಶ್ಚೇತನ ಕಾರ್ಯದ ವೇಳೆ ಕೆರೆಯಲ್ಲಿನ ಹೂಳು ಮಣ್ಣನ್ನು ಹೆಚ್ಚಿನ ಪ್ರಮಾಣದಲ್ಲಿ ಕೆರೆಯ ಸುತ್ತಲಿನ ರೈತರು ಟ್ರ್ಯಾಕ್ಟರ್ ಮೂಲಕ 3000 ಕ್ಕೂ ಅಧಿಕ ಟ್ರಿಪ್ ಮಣ್ಣನ್ನು ಜಮೀನಿಗೆ ಹಾಕಿ ಕೊಂಡಿದ್ದಾರೆ. ಕೆರೆ ತಳವನ್ನು ಆಳಗೊಳಿಸಿ, ನೀರು ಹಿಡಿದಿಡುವ ಸಾಮರ್ಥ್ಯ ಹೆಚ್ಚಿಸಲಾಯಿತು. ಉತ್ತಮ ಫಲವತ್ತಾದ ಮಣ್ಣು ರೈತರ ಜಮೀನಿಗೆ ಸೇರ್ಪಡೆಗೊಂಡಿದೆ.

### ಕೆರೆ ಅಭಿವೃದ್ಧಿ ನಂತರ ರೈತರು ಹೇಳಿದ್ದೇನು....

ಈ ಯೋಜನೆಯಿಂದ ಲಾಭ ಪಡೆದ ರೈತರಲ್ಲಿ ಚನ್ನಳ್ಳಿ ತಾಂಡಾದ 42 ವರ್ಷದ ರೈತ ಮಲ್ಲೇಶ್ ಲಮಾಣಿ ಪ್ರಮುಖರು. ಅವರು 3 ಎಕರೆ ಒಣಭೂಮಿಯಲ್ಲಿ ಮೆಕ್ಕೆಜೋಳ, ತೆಂಗು ಮತ್ತು ಸೂರ್ಯಕಾಂತಿ ಬೆಳೆಯುತ್ತಿದ್ದಾರೆ. ನೀರಿನ ಕೊರತೆಯಿಂದಾಗಿ ಅವರ ಎರಡು ಬೋರ್ವೆಲ್ಲಗಳಲ್ಲಿ ಒಂದು ಸಂಪೂರ್ಣವಾಗಿ



ಒಣಗಿಹೋಗಿದ್ದು, ಇನ್ನೊಂದು ಬೋರ್ವೆಲ್ ಕಡಿಮೆ ನೀರು ನೀಡುತ್ತಿತ್ತು. ಇದರ ಪರಿಣಾಮವಾಗಿ ವರ್ಷಕ್ಕೆ ಒಂದೇ ಬೆಳೆ ಬೆಳೆಯುವ ಪರಿಸ್ಥಿತಿ ಎದುರಾಗಿತ್ತು.

ಕೆರೆ ಪುನಶ್ಚೇತನದ ಭಾಗವಾಗಿ ಅವರ ಭೂಮಿಗೆ 350 ಟ್ರ್ಯಾಕ್ಟರ್ ಲೋಡ್ ಕೆರೆಯ ಹೂಳಿನ ಮಣ್ಣನ್ನು 50000 ರೂಪಾಯಿ ವೆಚ್ಚದಲ್ಲಿ ಹಾಕಿಕೊಂಡಿದ್ದಾರೆ.ಇದರಿಂದಾಗಿ ಮಲ್ಲೇಶ್ ಲಮಾಣಿಯವರ ಜಮೀನಿನ ಫಲವತ್ತತೆಯ ಸಾರ ಹೆಚ್ಚಳವಾಗಿದ್ದು. ಮುಂಗಾರಿನ ಬೆಳೆಯ ಇಳುವರಿಯಲ್ಲಿಯು ಸಹ ಗಮನಾರ್ಹ ಬದಲಾವಣೆ ಕಂಡಿದೆ. ಮಳೆಗಾಲದ ನಂತರ ಕೆರೆಯಲ್ಲಿ ಹೆಚ್ಚಿನ ಸಂಗ್ರಹಗೊಂಡಿದ್ದರ ಜೊತೆಯಲ್ಲಿ ಕೊಳವೆಬಾವಿಗಳಲ್ಲಿ ನೀರಿನ ಪ್ರಮಾಣವು ವೃದ್ಧಿಗೊಂಡಿದೆ. ಬೇಸಿಗೆಯಲ್ಲಿಯು ಸಹ ಈ ಬಾರಿ ಬೇಸಾಯ ಮಾಡಲು ನೆರವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

**ಬದಲಾವಣೆಯ ಹಾದಿ ಹಿಡಿಯಿತು ಕೆರೆ**

ಈ ಬಾರಿ ಮುಂಗಾರು ಆರಂಭದಲ್ಲಿಯೆ ತಳವಾರ ಕೆರೆ ನೀರಿನಿಂದ ತುಂಬಿಕೊಂಡಿದೆ. ಸುತ್ತಮುತ್ತಲಿನ ಕೊಳೆವೆಬಾವಿಗಳ ಜಲಮಟ್ಟ ಏರಿಕೆ ಕಂಡಿದೆ.ವರುಷಕ್ಕೆ ಒಂದೇ ಬೆಳೆ ಬೆಳೆಯುತ್ತಿದ್ದ ರೈತರು ಈಗ ಎರಡು ಬೆಳೆ ಬೆಳೆಯುವ ನಿರೀಕ್ಷೆಯಲ್ಲಿದ್ದಾರೆ. ಕೃಷಿ ಉತ್ಪಾದನೆ ಹೆಚ್ಚುವ ಜೊತೆಗೆ ರೈತರ ಆದಾಯ ಹೆಚ್ಚಳವಾಗುವ ಸಂತಸದಲ್ಲಿದ್ದಾರೆ. ರೈತರ ಸಹಕಾರದಿಂದಾಗಿ ಮನುವಿಕಾಸ ಸಂಸ್ಥೆಯು ಅವಸಾನದ ಕೆರೆಯನ್ನು ಪುನಶ್ಚೇತನಗೊಳಿಸಲು ಸಾಧ್ಯವಾಯಿತು.



# ಸ್ವ ಸಹಾಯ ಸಂಘಗಳಲ್ಲಿ ಡಿಜಿಟಲ್ ಸಾಕ್ಷರತೆಯ ಮಹತ್ವ

ಸ್ವ ಸಹಾಯ ಸಂಘಗಳು ಇಂದು ದೇಶದಲ್ಲಿ ಬಡತನ ನಿರ್ಮೂಲನೆಯಲ್ಲಿ ಹೊಸ ಕ್ರಾಂತಿಯನ್ನು ಮಾಡಿವೆ. ಬಡವರ ಕೈಗಳಲ್ಲಿ ಹಣಕಾಸು ವಹಿವಾಟು ಹೆಚ್ಚಾಗುತ್ತಿದ್ದು ಬಡವರ ಅನೇಕ ಕನಸುಗಳು ನನಸಾಗುವಲ್ಲಿ ಸ್ವ ಸಹಾಯ ಸಂಘಗಳ ಪಾತ್ರ ಅತಿ ಮುಖ್ಯ ಹತ್ತರಿಂದ ಹದಿನೈದು ಜನ ಮಹಿಳೆಯರು ಅದರಲ್ಲೂ ಸಮಾನ ಮನಸ್ಕರು ಸೇರಿ ಪರಸ್ಪರ ವಿಶ್ವಾಸದಿಂದ ಉಳಿತಾಯ ಮತ್ತು ಸಾಲದ ವ್ಯವಹಾರವನ್ನು ಮಾಡುತ್ತಾ ಬ್ಯಾಂಕಿನಲ್ಲಿ ಜಂಟಿ ಖಾತೆಯನ್ನು ತೆರೆದು ತಾವು ಮಾಡಿದ ಉಳಿತಾಯವನ್ನು ಬ್ಯಾಂಕ್ ನಲ್ಲಿ ಜಮಾ ಮಾಡಿ ತಮ್ಮ ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳುತ್ತಾ ಬರುತ್ತಾರೆ.

ಸಾಲ ಕೊಡುವ ಬಡ್ಡಿ ವ್ಯವಹಾರಸ್ಥರ ಎದುರು ಕೈಕಟ್ಟಿ ತಲೆಬಾಗಿ ನಿಲ್ಲದೆ ತಮ್ಮ ಆರ್ಥಿಕ ಸಂಕಷ್ಟದಲ್ಲಿ ಸ್ವ ಸಹಾಯ ಸಂಘಗಳ ಮೂಲಕ ಸಾಲ ಸೌಲಭ್ಯ ಪಡೆದು ಅನೇಕ ಕುಟುಂಬಗಳು ಇಂದು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿವೆ. ಕೇವಲ ಸಾಲಕ್ಕಾಗಿ ಮಾಡಿದ ಸಂಘಗಳು ಅಥವಾ ಸ್ವಾರ್ಥದಿಂದ ಕೂಡಿದ ಸಂಘಗಳು ಬಹಳ ದಿನ ಬದುಕುವುದಿಲ್ಲ. ಸ್ವ ಸಹಾಯ ಸಂಘಗಳೆಂದರೆ ಯಾವಾಗ ಬೇಕಾದರೂ ಸೇರಿ ಯಾವಾಗ ಬೇಕಾದರೂ ಬಿಡಬಹುದಾದ ಭಜನಾ ಮಂಡಳಿಗಳಲ್ಲ. ಸ್ವ ಸಹಾಯ ಸಂಘಗಳಿಗೆ ಒಂದು ಶಿಸ್ತಿದೆ ಮತ್ತು ನಿಯಮಾವಳಿಗಳಿವೆ ಇದು ಕೇವಲ ಅಲ್ಪಕಾಲೀನ ಉದ್ದೇಶವನ್ನು ಈಡೇರಿಸುವ ಹೆಕ್ಕುಮೇಳದ ಯಕ್ಷಗಾನವಲ್ಲ. ಇದು ನಿರಂತರವಾಗಿ ನಡೆಯುವ ಮತ್ತು ಕಾಲಕಾಲಕ್ಕೆ ಪ್ರಗತಿಯನ್ನು ಸಾಧಿಸುವ ಒಂದು ಸುಸ್ಥಿರ ವ್ಯವಸ್ಥೆ. ಯಾವಾಗ ಬೇಕಾದರೂ ಸೇರಿಕೊಳ್ಳುವ ಬೇಡವೆಂದಾಗ ಬಿಡುವ ಹವ್ಯಾಸಿ ಕಲಾವಿದರಿಗೆ ಇಲ್ಲಿ ಅವಕಾಶವಿಲ್ಲ

ಸ್ವ ಸಹಾಯ ಸಂಘಗಳಲ್ಲಿ ನಿಯಮಿತವಾದ ಸಭೆ, ಪುಸ್ತಕ ನಿರ್ವಹಣೆ, ಆರ್ಥಿಕ ವ್ಯವಹಾರಗಳಾದ ಉಳಿತಾಯ ಮತ್ತು ಸಾಲ ನಿರ್ವಹಣೆ, ಬ್ಯಾಂಕುಗಳಿಂದ ಸಾಲವನ್ನು ಪಡೆದು ಸದಸ್ಯರಿಗೆ ಅವಶ್ಯಕತೆಗನುಗುಣವಾಗಿ ಸಾಲಗಳನ್ನು ಹಂಚುವುದು ಮತ್ತು ಮರುಪಾವತಿ ಮಾಡಿಸುವುದು, ವಿವಿಧ ರೀತಿಯ ಆದಾಯ ಉತ್ಪನ್ನ ತರಬೇತಿಗಳನ್ನು ಪಡೆದು ವೈಯಕ್ತಿಕವಾಗಿ ಅಥವಾ ಗುಂಪಾಗಿ ಆದಾಯ ಉತ್ಪನ್ನಗಳನ್ನು ತಯಾರಿಸಿ ಆರ್ಥಿಕ ಸ್ವಾವಲಂಬನೆ ಗಳಿಸುವುದು, ಸಂಘದ ಒಂದು ಉದ್ದೇಶವಾದರೆ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸದೃಢಗೊಳ್ಳುವುದು ಕೂಡ ಸಂಘದ ಇನ್ನೊಂದು ಉದ್ದೇಶವಾಗಿದೆ. ಸಂಘದ ಸದಸ್ಯರು ಹೆಚ್ಚಾಗಿ ಬಡವರೇ ಇದ್ದು ಅಷ್ಟೊಂದು ಸಾಕ್ಷಿತರಾಗಿಲ್ಲಾ ಎಂದಾಕ್ಷಣ ಬುದ್ಧಿವಂತರಾಗಿಲ್ಲ ಎಂದೇನೂ ಅಲ್ಲ, ಕೆಲವೊಂದು ಮಾಹಿತಿಯ ಕೊರತೆಯಿಂದ ಸ್ವಲ್ಪ ಆರ್ಥಿಕವಾಗಿ ಹಿಂದುಳಿದಿದ್ದಾರೆ, ಅಂತಹ ಮಹಿಳೆಯರು ಅಥವಾ ಆಸಕ್ತ ಪುರುಷರು ವಿವಿಧ ರೀತಿಯ ತರಬೇತಿಗಳ ಮೂಲಕ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಮಾಹಿತಿಗಳನ್ನು ಪಡೆದು ಸಮಾಜದ ಮುಖ್ಯ



ವಾಹಿನಿಯಲ್ಲಿ ಗುರುತಿಸಿಕೊಳ್ಳುವುದು ಸ್ವ ಸಹಾಯ ಸಂಘದ ಧ್ಯೇಯವಾಗಿದೆ. ಮನುವಿಕಾಸ ಸಂಸ್ಥೆಯು 3000ಕ್ಕೂ ಹೆಚ್ಚು ಸ್ವ ಸಹಾಯ ಸಂಘಗಳನ್ನು ರಚಿಸಿದ್ದು 35 ಸಾವಿರಕ್ಕೂ ಹೆಚ್ಚು ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಆರ್ಥಿಕ ಶಿಸ್ತನ್ನು ಅಳವಡಿಸಿಕೊಂಡಿದ್ದಾರೆ. ಮನುವಿಕಾಸ ಸಂಸ್ಥೆಯು ಸ್ವಸಹಾಯ ಸಂಘಗಳಿಗೆ ಸಂಘದ ಪರಿಕಲ್ಪನಾ ತರಬೇತಿ, ಲೆಕ್ಕಪತ್ರ ನಿರ್ವಹಣಾ ತರಬೇತಿ ವಿವಿಧ ಆದಾಯ ಉತ್ಪನ್ನಗಳಾದ ತೋಟಗಾರಿಕೆ, ಕೈತೋಟ ನಿರ್ಮಾಣ, ಹೈನುಗಾರಿಕೆ, ಸುಸ್ಥಿರ ಕೃಷಿ, ಕೋಳಿ ಸಾಕಾಣಿಕೆ, ಗೊಬ್ಬರ ತಯಾರಿಕೆ ಹೀಗೆ ಹತ್ತು ಹಲವು ತರಬೇತಿಗಳನ್ನು ಕೃಷಿ ಮತ್ತು ಕೃಷಿಗೆ ಸಂಬಂಧಿಸಿದಂತೆ ನೀಡುತ್ತಿದೆ. ಅದರೊಂದಿಗೆ ಕೃಷಿಯೇತರ ಚಟುವಟಿಕೆಗಳಾದ ಹೊಲಿಗೆ ತರಬೇತಿ, ಅಡ್ವಾನ್ಸ್ಡ ಫ್ಯಾಷನ್ ಡಿಸೈನಿಂಗ್, ಕೆಟರಿಂಗ್, ಕಚೇರಿ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ರಿಟೇಲ್ ಮಾರ್ಕೆಟಿಂಗ್ ಮತ್ತಿತರ ಕ್ಷೇತ್ರಗಳಲ್ಲಿಯೂ ಕೂಡ ತರಬೇತಿಯನ್ನು ನೀಡಿ ಮಹಿಳೆಯರನ್ನು ಮತ್ತು ಯುವತಿಯರನ್ನು ಸ್ವ ಉದ್ಯೋಗ ಕಲ್ಪಿಸಿಕೊಳ್ಳಲು ಪ್ರೇರೇಪಿಸುತ್ತಿದೆ.

ಸ್ವ ಉದ್ಯೋಗ ಎಂದರೆ ಕಾಲೇಜು ಮುಗಿಸಿ ಯಾವುದೋ ಕಂಪನಿಗೆ ಅರ್ಜಿ ಗುಜರಾಯಿಸಿ ಕೆಲಸಕ್ಕೆ ಸೇರುವಷ್ಟು ಸುಲಭವಲ್ಲ. ಸ್ವ ಉದ್ಯೋಗ ಮಾಡಲು ಮಾನಸಿಕ ಸಿದ್ಧತೆ, ಹಣಕಾಸಿನ ಲಭ್ಯತೆ, ಸಂಪನ್ಮೂಲದ ಸದ್ಬಳಕೆಯ ಮಾಹಿತಿ, ಮಾರುಕಟ್ಟೆಯ ಜ್ಞಾನ, ವ್ಯವಹಾರ ಜ್ಞಾನ ಮತ್ತಿತರ ಕೌಶಲ್ಯಗಳು ಬೇಕಾಗುತ್ತವೆ, ಜೊತೆಗೆ ಮುಂಬರುವ ವ್ಯವಹಾರಿಕ ತೊಂದರೆ, ಆರ್ಥಿಕ ನಷ್ಟ ಮತ್ತಿತರ ಪರಿಸ್ಥಿತಿಯನ್ನು ಎದುರಿಸುವ ಎದೆಗಾರಿಕೆಯೂ ಬೇಕಾಗುತ್ತದೆ. ಗ್ರಾಮೀಣ ಮಹಿಳೆಯರಲ್ಲಿ ಈ ರೀತಿಯ ಮಾನಸಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಿ ಅವರನ್ನು ಸ್ವ ಉದ್ಯೋಗಿಗಳನ್ನಾಗಿ ಮಾಡುವುದು ಅಷ್ಟು ಸುಲಭವಲ್ಲ, ಆದರೂ ಸತತ ತರಬೇತಿಗಳು, ಅನುಸರಣೆ, ಸಾಲ ಸೌಲಭ್ಯ ಒದಗಿಸಿ ಉದ್ಯಮಶೀಲತಾ ತರಬೇತಿಗಳನ್ನು ನೀಡಿ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ಮಹಿಳಾ ಸಂಘಗಳಿಗೆ ಒದಗಿಸಿ 15000ಕ್ಕೂ ಹೆಚ್ಚು ಮಹಿಳೆಯರು ವಿವಿಧ ರೀತಿಯ ಸ್ವ ಉದ್ಯೋಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಸ್ವ ಸಹಾಯ ಸಂಘಗಳು ತಮ್ಮ ಆರ್ಥಿಕ ಸುಸ್ಥಿರತೆಯನ್ನು ಕಾಪಾಡಿಕೊಳ್ಳಲು ಡಿಜಿಟಲ್ ವ್ಯವಹಾರವನ್ನು ಮಾಡುವುದು ಅತಿ ಮುಖ್ಯವಾಗಿದೆ. ನಗದು ವ್ಯವಹಾರವನ್ನು ಮಾಡುವುದರಿಂದ ಕಾಗದಪತ್ರದ ನಿರ್ವಹಣೆಯ ಹೊರೆ ಸಂಘದ ಸದಸ್ಯರ ಮೇಲೆ ಬೀಳುತ್ತದೆ. ಕೆಲವೊಮ್ಮೆ ಪುಸ್ತಕ ನಿರ್ವಹಣೆ ಮಾಡುವವರು ಸಂಘದ ಸದಸ್ಯರು ನೀಡಿದ ಹಣವನ್ನು ಸರಿಯಾಗಿ ನಮೂದಿಸದೆ ಇದ್ದಲ್ಲಿ ಅಥವಾ ಅವರಲ್ಲಿ ಮೋಸದ ಭಾವನೆ ತುಂಬಿಕೊಂಡಿದ್ದಲ್ಲಿ ಸಂಘದ ಪ್ರಾಮಾಣಿಕ ಸದಸ್ಯರಿಗೆ ಅನ್ಯಾಯವಾಗುವ ಅನೇಕ ನಿದರ್ಶನಗಳು ನಮ್ಮ ಮುಂದೆ ಇವೆ. ಕಟ್ಟಿದ್ದು 500 ಆದರೆ ಬರೆದಿದ್ದು 400 ಬ್ಯಾಂಕಿಗೆ ಹೋಗಿದ್ದು 300 ಹೀಗೆ ಗದ್ದೆಗೆ ನೀರು ಬಿಟ್ಟಾಗ ಕಾಲುವೆ ಹೆಚ್ಚು ನೀರನ್ನು ನುಂಗಿದಂತೆ ಎನ್ನುವ ಗಾದೆಗೆ ಸಮಾನವಾಗಿ ಅನೇಕ ಸಂಘಗಳಲ್ಲಿ ಆರ್ಥಿಕ ಅವ್ಯವಹಾರಗಳು ಕಂಡುಬರುತ್ತವೆ ಸ್ವಸಹಾಯ ಸಂಘದ ಎಲ್ಲ ಸದಸ್ಯರು ಡಿಜಿಟಲ್ ವ್ಯವಹಾರಗಳಾದ ಫೋನ್ ಪೇ ಗೂಗಲ್ ಪೇ ಅಥವಾ ನೇರವಾಗಿ ಬ್ಯಾಂಕಿನ ಖಾತೆಗೆ ಹಣವನ್ನು ಜಮಾ ಮಾಡುವುದರಿಂದ ಜಮಾ ಮಾಡಿದವರಲ್ಲಿ ಮತ್ತು ಸಂಘದಲ್ಲಿ ಜಮಾ ಮಾಡಿದ ಬಗ್ಗೆ ಸರಿಯಾದ ಸಾಕ್ಷಿ ಇರುವುದರಿಂದ ಹಣಕಾಸಿನ ಅವ್ಯವಹಾರಕ್ಕೆ ಅವಕಾಶವಿರುವುದಿಲ್ಲ. ಮನುವಿಕಾಸ ಸಂಸ್ಥೆಯು ಎಲ್ಲಾ ಸ್ವಸಹಾಯ ಸಂಘಗಳಿಗೆ ಕ್ಯೂಆರ್ ಕೋಡನ್ನು ಬಳಸಿ ಹಣ ಜಮಾ ಮಾಡುವ ವಿಧಾನವನ್ನು ಪರಿಚಯ ಮಾಡಿಸಿಕೊಡುತ್ತಿದೆ. ಇದರಿಂದ ನಗದುರೂಪದ ಹಣ ಒಬ್ಬರಿಂದ ಇನ್ನೊಬ್ಬರ ಕೈಗೆ ಬದಲಾಗದೆ ಸದಸ್ಯರ ಹಣ ನೇರವಾಗಿ ವೈಯಕ್ತಿಕ ಖಾತೆಯಿಂದ ಸಂಘದ ಖಾತೆಗೆ ಜಮಾ ಆಗುವುದರಿಂದ ಯಾವುದೇ ರೀತಿಯ ಲೆಕ್ಕಪತ್ರದಲ್ಲಿ ಗೊಂದಲಗಳು ಉಂಟಾಗುವುದಿಲ್ಲ.

ಡಿಜಿಟಲ್ ವ್ಯವಸ್ಥೆಯಲ್ಲಿಯೂ ಕೂಡ ಅನೇಕ ಅಡೆತಡೆಗಳಿವೆ, ಕ್ಯೂಆರ್ ಕೋಡ್ ಗಳನ್ನು ಸರಿಯಾಗಿ ಗಮನಿಸದೆ ಸ್ಕ್ಯಾನ್ ಮಾಡಿದ ನಂತರ ಅಕೌಂಟಿನ ಹೆಸರನ್ನು ಗಮನಿಸದೇ ಹಣವನ್ನು ವರ್ಗಾಯಿಸಬಾರದು, ತಾವು ನಮೂದಿಸಿದ ಹಣದ ಮೊತ್ತವನ್ನು ಪುನರ್ ಪರಿಶೀಲಿಸಿ ಹಣವನ್ನು ಜಮಾ ಮಾಡಬೇಕು.

ಗೂಗಲ್ ಪೇ ಅಥವಾ ಫೋನ್ ಪೇ ಮೂಲಕ ಹಣ ಜಮಾ ಮಾಡಿದ್ದಲ್ಲಿ ಸಂಘದ ಪುಸ್ತಕದಲ್ಲಿ ಯಾವ ದಿನಾಂಕದಂದು ಹಣವನ್ನು ಜಮಾ ಮಾಡಲಾಗಿದೆ ಮತ್ತು ಅದರ ಟ್ರಾನ್ಸಾಕ್ಷನ್ ನಂಬರನ್ನು ಬರೆಸಬೇಕು. ಅಕಸ್ಮಾತ್ ನೇರವಾಗಿ ಬ್ಯಾಂಕಿಗೆ ಹೋಗಿ ಸಂಘದ ಖಾತೆಗೆ ಹಣವನ್ನು ಜಮಾ ಮಾಡಿದ್ದಲ್ಲಿ ಆ ರೆಮಿಟೆನ್ಸ್ ಸ್ಲಿಪ್ಪಿನ ಪ್ರತಿಯನ್ನು ಸಂಘದ ಪುಸ್ತಕ ನಿರ್ವಾಹಕರಿಗೆ ನೀಡಿ ಅದನ್ನು ಪುಸ್ತಕದಲ್ಲಿ ನಮೂದಿಸಬೇಕು.

ಸ್ವಸಹಾಯ ಸಂಘಗಳು ನೂರಕ್ಕೆ ನೂರು ಪ್ರತಿಶತ ನಗದು ವ್ಯವಹಾರವನ್ನು ಮಾಡದೆ ಕೇವಲ ಡಿಜಿಟಲ್ ವ್ಯವಹಾರವನ್ನು ಮಾಡಿದ್ದಲ್ಲಿ ಅಂತಹ ಸಂಘಗಳನ್ನು ಗುರುತಿಸಿ ಅವರಿಗೆ ವಿಶೇಷ ಬಹುಮಾನವನ್ನು ನೀಡುವ ಯೋಜನೆಯನ್ನು ಮನುವಿಕಾಸ ಸಂಸ್ಥೆ ಕೈಗೊಂಡಿದೆ, ಹೆಚ್ಚಿನ ಸ್ವಸಹಾಯ ಸಂಘಗಳು ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಳ್ಳಲು ವಿನಂತಿ.

**"ಬನ್ನಿ ಡಿಜಿಟಲ್ ವ್ಯವಹಾರವನ್ನು ಮಾಡೋಣ ನಗದು ವ್ಯವಹಾರವನ್ನು ಸ್ಥಗಿತಗೊಳಿಸೋಣ ಬಹುಮಾನ ಗೆಲ್ಲೋಣ"**



MANUVIKASA

# ಕೆರೆ ತುಂಬಿತು – ರೈತರ ಬದುಕಿಗೆ ನಗು ತಂದಿತು...

ಕಳೆದ ಒಂದಷ್ಟು ದಿನಗಳಿಂದ ಸುರಿಯುತ್ತಿದ್ದ ಮಳೆರಾಯ  ಕೊಂಚ ಬಿಡುವನ್ನು ಕೊಟ್ಟಿದ್ದ. ಮನುವಿಕಾಸ ಸಂಸ್ಥೆಯು ಪ್ರಸ್ತುತ ವರ್ಷದಲ್ಲಿ ಹಾನಗಲ್, ಹಿರೇಕೆರೂರು, ಬ್ಯಾಡಗಿ, ಶಿಗ್ಗಾಂವ್, ಕಲಘಟಗಿ ಹಾಗೂ ಸೊರಬ ತಾಲೂಕುಗಳಲ್ಲಿ 35 ಕೆರೆಗಳನ್ನ ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿದೆ. ಬೇಸಿಗೆಯಲ್ಲಿ ಕೆರೆಯ ಹೂಳನ್ನು ತೆಗೆದು ಮಳೆಗಾಲದಲ್ಲಿ ಸ್ವಚ್ಛಂದವಾಗಿ ನೀರು ತುಂಬಿಕೊಂಡಾಗ ಕೆರೆಗಳನ್ನು ನೋಡುವುದೇ ಒಂದು ಮಹದಾನಂದ. ಹಾಗಾಗಿ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರ ಅನುಮತಿ ಪಡೆದು ಬೆಳ್ಳಂಬೆಳಿಗ್ಗೆ ನನ್ನ ಸಹೋದ್ಯೋಗಿಗಳೊಟ್ಟಿಗೆ ಕೆರೆ ನೋಡಲೆಂದು ಹೊರಟಾಗಿತ್ತು.

ಹಾವೇರಿ ಜಿಲ್ಲೆಯ ಬ್ಯಾಡಗಿ ಮತ್ತು ಹಾನಗಲ್ ತಾಲೂಕಿನ ಗ್ರಾಮಗಳಾದ ಘಾಳಪೂಜಿ, ಚಿಕ್ಕಬಾಸುರ, ಹಿರೇಅಣಜಿ, ಕಿರವಾಡಿ ಹಾಗೂ ಕೊಂಡೋಜಿ  ಊರಿನಲ್ಲಿ ಅಭಿವೃದ್ಧಿಪಡಿಸಿದ ಕೆರೆಗಳಿಗೆ ಹೋಗಿದ್ದೆ. ಘಾಳಪೂಜಿ ಗ್ರಾಮದ ಸರಿಸುಮಾರು 15 ಎಕರೆ ವಿಸ್ತೀರ್ಣದ ಒಡ್ಡಿನಕಟ್ಟಿ ಕೆರೆಗೆ ಎರಡು ವರ್ಷಗಳ ಹಿಂದೆಯೇ ನಾಲ್ಕಾರು ಬಾರಿ ಭೇಟಿ ಮಾಡಿ ಕೆರೆ ಹೂಳೆತ್ತುವ ಕುರಿತು ಪರಿಶೀಲಿಸಿದ್ದೆ. ಕೆರೆಯು ಸಂಪೂರ್ಣವಾಗಿ ಹೂಳುಮಯವಾಗಿತ್ತು.  ಉತ್ತಮ ಮಳೆ ಕಂಡರೂ ಸಹ ಕೆರೆಯಲ್ಲಿ ನೀರು ನಿಲ್ಲದೆ ಊರಿನ ಜಾನುವಾರುಗಳು  ಹಸಿರು ಮೇಯುವ ತಾಣವಾಗಿತ್ತು. ಕೆರೆಯಲ್ಲಿ ನೀರು ನಿಲ್ಲದ ಕಾರಣ ಬೇಸಿಗೆಯಲ್ಲಿ ಬೆಳೆ ಬೆಳೆಯಲು ರೈತರಿಗೆ ತೊಂದರೆ ಆಗಿತ್ತು.  ನಮ್ಮ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರು ಈ ಕೆರೆಯನ್ನು ರೈತರ ಸಹಭಾಗಿತ್ವದೊಂದಿಗೆ ಹೂಳೆತ್ತಿ ಅಭಿವೃದ್ಧಿ ಪಡಿಸಬೇಕೆಂದು ನಿರ್ಧಾರ ಮಾಡಿಯೇ ಬಿಟ್ಟಿದ್ದರು. ಕಳೆದ ವರ್ಷ ಈ ಕೆರೆಯನ್ನ ಹೂಳೆತ್ತಿ ಅಭಿವೃದ್ಧಿಪಡಿಸಲಾಗಿತ್ತು. ಸಂಸ್ಥೆಯ ಸಿಬ್ಬಂದಿಗಳ ಅವಿರತ ಪರಿಶ್ರಮವು ಅದರಲ್ಲಿತ್ತು. ಈಗ ನೋಡಿದರೆ ಕೆರೆ ತುಂಬ ನೀರು ತುಂಬಿ ಹೆಚ್ಚು ಕಡಿಮೆ ಸಮುದ್ರದಂತೆ ಕಾಣುತ್ತಿದೆ. ದನ ಕರುಗಳನ್ನು ಮೈ ತೊಳೆಯಲು, ನೀರು ಕುಡಿಸಲು, ರೈತರು ಕೆರೆಗಳಿಗೆ ಬರುತ್ತಿದ್ದಾರೆ.  ಈ ವರ್ಷದ ಬಿರು ಬೇಸಿಗೆಯಲ್ಲಿಯೂ ಸಹ ಕೆರೆಯಲ್ಲಿ ನೀರು ಖಾಲಿಯಾಗದೆ ಸಂಪಾಗಿ ನೀರಿತ್ತು. ಬೇಸಿಗೆ ಬೆಳೆ ಬೆಳೆಯಲು ಕೂಡ ನೀರಿಗೆ  ತತ್ವಾರವಾಗಿಲ್ಲ ಎಂಬುದು  ಅಲ್ಲಿನ ಸ್ಥಳೀಯ ರೈತರ ಅನಿಸಿಕೆ.

ಒಂದು ಊರಿನ ಕೆರೆ ಅಭಿವೃದ್ಧಿಯಿಂದ ಕೇವಲ ನೀರಿನ ಸಂಗ್ರಹ ಹೆಚ್ಚಳ ಅಥವಾ ಕೃಷಿಗೆ ಮಾತ್ರ ಅನುಕೂಲವಾಗುವುದಿಲ್ಲ. ಆ ಊರಿನ ಜೀವ ವೈವಿಧ್ಯತೆ,  ಉತ್ತಮ ಪರಿಸರ ನಿರ್ವಹಣೆಗೂ ಸಹ ಕೆರೆಗಳು ಅನುಕೂಲತೆಯನ್ನು ಒದಗಿಸಿಕೊಡುತ್ತವೆ. ಕೆಲವೊಂದು ಕೆರೆಗಳಲ್ಲಿ ಅಪಾರವಾದ ಹೂಳು ತುಂಬಿ ಬಳ್ಳಿರೂಪದ (ಕಳ್ಳಿ ಗಿಡ ಕರೆಯಲ್ಪಡುವ) ಸಸಿಗಳು ಹುಟ್ಟಿಕೊಂಡಿರುತ್ತದೆ.  ನೀರು ಕುಡಿಯಲೆಂದು ದನ ಕರುಗಳು ಕೆರೆಗೆ ಇಳಿದಾಗ ಕೆಲವೊಮ್ಮೆ ಕಾಲಿಗೆ ಕಳ್ಳಿಗಿಡದ ಬಳ್ಳಿ ಸುತ್ತಿಕೊಂಡು ಕೆರೆಯಿಂದ ಮೇಲೆ ಬರಲಾಗದೆ ಅಲ್ಲಿಯೇ ಉಸಿರು ಚೆಲ್ಲಿದ ನಿದರ್ಶನಗಳು ಇವೆ. ಅಂತಹ ಕೆರೆಗಳಿಗೆ ಮನುಷ್ಯರೂ ಕೂಡ ಇಳಿಯುವುದು ಅಪಾಯಕಾರಿ, ಜಾನುವಾರುಗಳ ಕಳೆಬರಹವನ್ನು ಸಹ ಮೇಲೆತ್ತಲು ಸಾಧ್ಯವಾಗದೆ ಅಂತಹ ಕೆರೆಗಳಿಗೆ ಸ್ಮಶಾನಕಟ್ಟಿ ಕೆರೆ ಎಂಬ ಹೆಸರು ಬಂದಿರಬಹುದು ಎಂಬುದು ನನ್ನ ಭಾವನೆ.



ಕೆ ಹೂಳೆತ್ತುವ ಪೂರ್ವ





ಕೆರೆ ಹುಳೆತ್ತುತ್ತಿರುವುದು





ಕೆರೆ ಹುಳೆತ್ತಿದ ನಂತರ



ಕೆರೆ ಕಟ್ಟೆಗಳು ನೀರಿನಿಂದ ತುಂಬಿದ್ದರೆ ಸುತ್ತಲಿನ ವಾತವಾರಣವನ್ನು ಜನರ ಬದುಕನ್ನು ಸಹ ತಂಪಾಗಿರಿಸುತ್ತದೆ. ಕೃಷಿ & ಹೈನುಗಾರಿಕೆ ಅಭಿವೃದ್ಧಿಗೆ ಕೆರೆಗಳು ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತದೆ. ಕೆರೆಯ ಹೂಳೆತ್ತಿದ ಮಣ್ಣಲ್ಲಿ ಸಾವಯವ ಇಂಗಾಲದ ಪ್ರಮಾಣ ಹೆಚ್ಚಿರುತ್ತದೆ, ರೈತರು ಇಂತಹ ಮಣ್ಣನ್ನು ತಮ್ಮ ಕೃಷಿ ಜಮೀನುಗಳಿಗೆ ಹಾಕುವುದರಿಂದ ಬೆಳೆಯಲ್ಲಿನ ಇಳುವರಿ ಹೆಚ್ಚಳಗೊಂಡು ಗೊಬ್ಬರಗಳಿಗೆ ವ್ಯಯಿಸಬೇಕಿದ್ದ ಖರ್ಚುಗಳು ಕಡಿಮೆಗೊಳ್ಳುತ್ತದೆ ಎಂಬುದು ಹೆಚ್ಚಿನ ರೈತರ ಅನಿಸಿಕೆ ಆಗಿದೆ.

ಫಾಳಪೂಜಿಯ ದೈತ್ಯ ಕೆರೆ ನೀರು ಹೊತ್ತುಕೊಂಡಿರುವುದನ್ನು ಕಣ್ತುಂಬಿಕೊಂಡು ಉಳಿದ ಕಡೆಗಳಲ್ಲಿನ ಕೆರೆಗಳನ್ನು ವೀಕ್ಷಿಸಿ, ಇಳಿ ಸಂಜೆಯ ಹೊತ್ತಿಗೆ ಮಳೆರಾಯ ಮತ್ತೆ ಅಬ್ಬರಿಸಲು ಆರಂಭಿಸಿದ್ದ, ತುಸು ಗಾಳಿ ಮಳೆಗೆ ಬೆಚ್ಚಗಿನ ಕಾಫಿಯನ್ನು ಹೀರಿ ಶಿರಸಿ ತಲುಪುವ ಹೊತ್ತಿಗೆ ಪಬ್ಲಿಕ್ ಟಿವಿಯಲ್ಲಿ ರಂಗಣ್ಣ ವಾರ್ತೆ ಓದುವ ಸಮಯವು ಮುಗಿದಿತ್ತು.

# ಭತ್ತದ ಬೇಸಾಯದಲ್ಲಿ ಶ್ರೀ ಪದ್ಧತಿ

ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ಅನ್ನವು ಜನರ ಆಹಾರ ಪದ್ಧತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಭತ್ತ ಬೇಳೆ-ಕಾಳು ಬೆಳೆಸುವ ಪರಂಪರೆಯ ವಿಧಾನಗಳಲ್ಲಿ ಹೆಚ್ಚಿನ ನೀರು, ಹೆಚ್ಚು ಬೀಜ ಮತ್ತು ಅಧಿಕ ಶ್ರಮ ಬೇಕಾಗುತ್ತದೆ. ಇದರಿಂದ ಉತ್ಪಾದನೆಗೆ ಬಂದ ಲಾಭಕ್ಕಿಂತ ಹೆಚ್ಚು ವೆಚ್ಚವಾಗುವುದು ಸಾಮಾನ್ಯ. ಈ ಸಮಸ್ಯೆಗಳಿಗೆ ಪರಿಹಾರವಾಗಿ ಶ್ರೀ ಪದ್ಧತಿ (System of Rice Intensification) ಎಂಬ ಹೊಸ ವಿಧಾನವನ್ನು ಕೃಷಿ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಇದರಲ್ಲಿ ನೀರಿನ ಬಳಕೆ ಕಡಿಮೆ, ಗೊಬ್ಬರ ಮತ್ತು ಬೀಜದ ಬಳಕೆ ಕಡಿಮೆ, ಆದರೆ ಉತ್ಪಾದನೆ ಹೆಚ್ಚಾಗುವುದು. ಇದು ಸಾಮಾನ್ಯ ರೈತರಿಗೂ ಸಹ ಅನುಕೂಲವಾಗುವ ವಿಧಾನವಾಗಿದೆ.

### ಶ್ರೀ ವಿಧಾನದಿಂದಾಗುವ ಲಾಭಗಳು:

- 40–60 ಪ್ರತಿಶತ ನೀರಿನ ಉಳಿತಾಯ.
- ಬೀಜದ ಪ್ರಮಾಣದಲ್ಲಿ ಸಾಕಷ್ಟು ಉಳಿತಾಯ, ಸಾಂಪ್ರದಾಯಿಕ ಪದ್ಧತಿಯಲ್ಲಿ ಪ್ರತಿ ಎಕರೆಗೆ ಬಳಸುವ ಬೀಜದ ಪ್ರಮಾಣ ಶ್ರೀ ಪದ್ದತಿಯಲ್ಲಿ 5 ಎಕರೆಗೆ ಸಾಕಾಗುವುದು.
- ಆರೋಗ್ಯವಂತ ಸಸಿಗಳಿಂದಾಗಿ ಕೀಟ ಹಾಗೂ ರೋಗದ ಬಾಧೆ ಕಡಿಮೆ.
- ಶೇ. 25–50 ರಷ್ಟು ಇಳುವರಿಯಲ್ಲಿ ಹೆಚ್ಚಳ.
- ಗಿಡಗಳ ಬೇರುಗಳು ಬಲವಾಗಿ ಬೆಳೆಯುವ ಕಾರಣದಿಂದ ಉತ್ಪಾದನೆ ಹೆಚ್ಚಾಗುತ್ತದೆ.
- ಸಾವಯವ ಪದಾರ್ಥಗಳ ಬಳಕೆಯಿಂದ ಮಣ್ಣು ಸುಸ್ಥಿರವಾಗುತ್ತದೆ ಮತ್ತು ಬೀಜ, ನೀರು ಹಾಗೂ ಗೊಬ್ಬರಗಳ ಬಳಕೆ ಕಡಿಮೆಯಾಗುವುದರಿಂದ ವೆಚ್ಚ ತಗ್ಗುತ್ತದೆ.

### ಶ್ರೀ ಪದ್ಧತಿಯಲ್ಲಿ ಪಾಲಿಸಬೇಕಾದ ಮುಖ್ಯ ವಿಧಾನಗಳು

- 10 ರಿಂದ 12 ದಿನದ ಸಸಿಗಳನ್ನು ನಾಟಿ ಮಾಡುವುದು.
- ಸಸಿಯಿಂದ ಸಸಿಗೆ ಮತ್ತು ಸಾಲಿನಿಂದ ಸಾಲಿಗೆ ಸರಿಸುಮಾರು ಮುಕ್ಕಾಲು ಅಡಿ ಅಂತರ ಇರಬೇಕು. ಇದರಿಂದ ಬೆಳೆಗೆ ಗಾಳಿ, ಬೆಳಕು ಮತ್ತು ಪೋಷಕಾಂಶಗಳು ಸಾಕಷ್ಟು ದೊರಕುತ್ತವೆ.
- ಭೂಮಿಯಲ್ಲಿ ನಿರಂತರವಾಗಿ ನೀರು ನಿಲ್ಲಿಸದೆ, ಕೇವಲ ತೇವವಾಗಿರಿಸುವ ಮೂಲಕ ನೀರಿನ ಉಳಿತಾಯ ಮಾಡಲಾಗುತ್ತದೆ.
- ಕೊನೋವೀಡರ್ ಬಳಕೆಯಿಂದಾಗಿ ಕಳೆ ಕೊಚ್ಚುವುದರ ಜೊತೆ-ಜೊತೆಗೆ ಗದ್ದೆಯ ಮಣ್ಣು ಕೂಡ ಸಡಿಲಗೊಂಡು





ಸಸಿಗಳಿಗೆ ಸರಿಯಾಗಿ ಗಾಳಿ, ಬೆಳಕು ದೊರೆಯಲು ಸಹಕಾರಿಯಾಗುತ್ತದೆ. ಕಳೆಯ ಸಮರ್ಪಕ ನಿರ್ವಹಣೆ ಆಗುತ್ತದೆ.

- ಮಣ್ಣಿನ ಆರೋಗ್ಯ ಕಾಪಾಡಲು ಸಾವಯವ ಗೊಬ್ಬರವನ್ನು ಹೇರಳವಾಗಿ ಬಳಸಬೇಕು.

## ಬೀಜ ಆಯ್ಕೆಯ ವಿಧಾನ:

- ಒಂದು ಎಕರೆ ನಾಟಿ ಪ್ರದೇಶಕ್ಕೆ ಬೇಕಾಗುವ 2 ಕೆಜಿ ಬೀಜವನ್ನು ತೆಗೆದುಕೊಳ್ಳಬೇಕು.
- ಮೊದಲೇ ಅರ್ಧ ಬಕೆಟ್ ನೀರನ್ನು ತೆಗೆದುಕೊಂಡು ಅದರಲ್ಲಿ ಒಂದು ಕೋಳಿ ಮೊಟ್ಟೆಯನ್ನು ಮುಳುಗಿಸಬೇಕು. ತದನಂತರ ಆ ನೀರಿಗೆ ಉಪ್ಪನ್ನು ಸೇರಿಸಿ ತಿರುಗಿಸುತ್ತಾ ಮೊಟ್ಟೆಯನ್ನು ಆ ಮಿಶ್ರಣದಲ್ಲಿ ಬಿಟ್ಟಾಗ ಮೊಟ್ಟೆಯ 1/4 ಭಾಗ ನೀರಿನ ಮೇಲೆ ತೇಲಬೇಕು. (ಮೊಟ್ಟೆ ನೀರಿನ ಮೇಲೆ ತೇಲದೇ ಇದ್ದ ಪಕ್ಷದಲ್ಲಿ ಮೇಲೆ ತಿಳಿಸಿದ ಕ್ರಿಯೆಯನ್ನು ಪುನಃ ಮಾಡಬೇಕು). ಆನಂತರ ನಿರ್ದಿಷ್ಟ ಪ್ರಮಾಣದ ಬೀಜವನ್ನು ಹಾಕಿ ಸ್ವಲ್ಪ ತಿರುಗಿಸಿ, ನಂತರ ಜೊಳ್ಳಾದ, ರೋಗಪೀಡಿತ ಹಾಗೂ ಕೆಟ್ಟ ಬೀಜಗಳು ತೇಲುತ್ತವೆ. ಬಕೆಟ್ ತಳಭಾಗದಲ್ಲಿರುವ ಸದೃಢ ಬೀಜಗಳನ್ನು ತೆಗೆದು ಸ್ವಚ್ಛ ನೀರಿನಲ್ಲಿ ತೊಳೆದು ಉಪ್ಪಿನಾಂಶವನ್ನು ಹೋಗಲಾಡಿಸಬೇಕು. ಸ್ವಚ್ಛ ಮಾಡಿದ ಬೀಜಗಳನ್ನು ಒದ್ದೆ ಮಾಡಿದ ತಟ್ಟಿನಲ್ಲಿ ಹಾಕಿ ಕಟ್ಟಿ ನೀರಿನಲ್ಲಿ ಮುಳುಗಿಸಿ 18 ಗಂಟೆಗಳ ಕಾಲ ನೆನಸಿಡಬೇಕು.
- 18 ಗಂಟೆಗಳ ನಂತರ ಕಟ್ಟನ್ನು ಬಿಚ್ಚಿ ಸ್ವಲ್ಪ ತೇವಾಂಶ ಕಾಪಾಡಿಕೊಂಡು ಜೈವಿಕ ಗೊಬ್ಬರಗಳಾದ ಅಜೋಸ್ಪಿರಿಲಂ (200 ಗ್ರಾಂ), ರಂಜಕ ಕರಗಿಸುವ ಗೊಬ್ಬರ (ಪಿ ಎಸ್ ಬಿ, 200 ಗ್ರಾಂ) ಮತ್ತು ಟ್ರೈಕೋಡರ್ಮಾ (20 ಗ್ರಾಂ) ಅಥವಾ 4 ಗ್ರಾಂ (ಒಂದು ಬೆಂಕಿಪೊಟ್ಟಣ) ಬಾವಿಸ್ಟಿನ್ ಪುಡಿಯನ್ನು ಸಮವಾಗಿ ಬೀಜಗಳ ಮೇಲೆ ಹರಡಿ ಬೆರೆಸಿ ಬೀಜೋಪಚಾರ ಮಾಡಬೇಕು.
- ಉಪಚರಿಸಿದ ಬೀಜಗಳನ್ನು ಅದೇ ತಟ್ಟಿನಲ್ಲಿ ಕಟ್ಟಿ ಸ್ವಲ್ಪ ಎತ್ತರದ ಜಾಗದಲ್ಲಿ ಇಡಬೇಕು. ಮುಂದಿನ 12ರಿಂದ 18 ಗಂಟೆಗಳವರೆಗೂ ತೇವವಿರುವ ಹಾಗೆ ನೀರನ್ನು ಸಿಂಪಡಿಸುತ್ತಿರಬೇಕು. (ಹೆಚ್ಚು ನೀರು ಹಾಕಿದಲ್ಲಿ ನೀರಿನೊಟ್ಟಿಗೆ ಔಷಧಿ ಅಂಶವು ಸೋರಿ ಹೋಗುವುದು). ಮೊಳಕೆ ಬಂದ ನಂತರ ತೆಗೆದು ಸಸಿ ಮಡಿಗಳಲ್ಲಿ ತೆಳುವಾಗಿ ಚೆಲ್ಲಬೇಕು.

## ಸಸಿ ಮಡಿ:

- ಒಂದು ಎಕರೆ ನಾಟಿಗಾಗಿ 30 ಅಡಿ ಉದ್ದ, 30 ಅಡಿ ಅಗಲವುಳ್ಳ ಹೆಚ್ಚು ನೀರು ನಿಲ್ಲದೇ ಇರುವ ಎತ್ತರದ ಜಾಗವನ್ನು ಬಳಸಿ ಏರುಮಡಿಗಳನ್ನು ನಿರ್ಮಿಸಿ.
- ಪ್ರತಿ 5 ಅಡಿ ಅಂತರದಲ್ಲಿ ಅರ್ಧ ಅಡಿಯ ಹಾಯಿ ಕಾಲುವೆ ನಿರ್ಮಾಣ ಮಾಡುವುದು.
- ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರವನ್ನು ಹೇರಳವಾಗಿ ಮಣ್ಣಿನಲ್ಲಿ ಮಿಶ್ರಣ ಮಾಡಿ ಸಸಿ ಮಡಿ ತಯಾರಿಸಿ, ಪ್ರತಿ

ಮಡಿಗೆ 200 ಗ್ರಾಂ ಕಾಂಪ್ಲೆಕ್ಸ್/ ಡಿ. ಎ. ಪಿ./ 6 ಕೆ.ಜಿ. ಎರೆಹುಳು ಗೊಬ್ಬರವನ್ನು ಸಮ ಪ್ರಮಾಣದಲ್ಲಿ ಬೆರೆಸಬೇಕು.

- ಮಡಿ ತಯಾರಿಸಿದ ಒಂದೆರಡು ಗಂಟೆಗಳಲ್ಲಿ ಮೊಳಕೆ ಬಂದ ಬೀಜಗಳನ್ನು ತೆಳ್ಳಗೆ ಮಡಿಗಳಲ್ಲಿ ಹರಡಿ ಭತ್ತದ ಹುಲ್ಲಿನ ಹೊದಿಕೆಯನ್ನು ಹೊದಿಸಿ, ದಿನಕ್ಕೆ ಎರಡು ಬಾರಿ ನೀರನ್ನು ಸಿಂಪಡಿಸುತ್ತಿರಬೇಕು.
- ಹುಲ್ಲಿನ ಹೊದಿಕೆಯನ್ನು ಮೊಳಕೆ ಬಂದ ನಂತರ ತೆಗೆದು ಹಾಕಬೇಕು.
- 10ರಿಂದ 14 ದಿನಗಳೊಳಗೆ ಸಸಿಗಳನ್ನು ಮುಖ್ಯ ಭೂಮಿಯಲ್ಲಿ ನಾಟಿ ಮಾಡಬೇಕು.
  (ಮುಖ್ಯಭೂಮಿಯನ್ನು ಸಾಂಪ್ರದಾಯಿಕ ಪದ್ಧತಿಯಂತೆ ಕೆಸರು ಗದ್ದೆ ತಯಾರಿಸಿ, ನೀರು ನಿಲ್ಲದಂತೆ ಬಸೆಯಬೇಕು)



**ಸಸಿ ನಾಟಿ:**

- ನಾಟಿ ಮಾಡುವ ಮುನ್ನ ಗದ್ದೆಯಲ್ಲಿನ ನೀರನ್ನು ಸಂಪೂರ್ಣವಾಗಿ ಬಸೆದು ನಂತರ ಶಿಫಾರಿತ ರಸಗೊಬ್ಬರವನ್ನು ಹಾಕಿ, ಮಾರ್ಕರ್ ಸಹಾಯದಿಂದ ಗುರುತು ಮಾಡಿಕೊಂಡು ಸಸಿ ನಾಟಿ ಮಾಡಬೇಕು.



**ಕಳೆ ನಿರ್ವಹಣೆ:**

- ಶ್ರೀ ಪದ್ಧತಿಯಲ್ಲಿ ಕಳೆ ನಿಯಂತ್ರಣವೇ ಬಹುಮುಖ್ಯ, ಕೊನೋವೀಡರ್ ಸಹಾಯದಿಂದ ನಾಟಿಯಾದ ನಂತರ 12–15 ದಿನಗಳಲ್ಲಿ ಪ್ರತಿ 15 ದಿನಗಳ ಅಂತರದಲ್ಲಿ ಕನಿಷ್ಠ ಮೂರು ಬಾರಿಯಾದರೂ ಕಳೆಯನ್ನು ಕೊಚ್ಚಿ ನಿಯಂತ್ರಿಸಬೇಕು. (ಕೊನೋವೀಡರ್ ಬಳಕೆ ಮಾಡುವ ಸಮಯದಲ್ಲಿ ಮತ್ತು ಒಂದು ದಿನ ಮುಂಚೆಯೇ ನೀರನ್ನು ತೆಳುವಾಗಿ ನಿಲ್ಲಿಸಬೇಕು. ಇದರಿಂದ ಮಣ್ಣು ಮೃದುವಾಗಿ ಕೊನೋವೀಡರ್ ಚಲಾಯಿಸಲು ಅನುಕೂಲವಾಗುತ್ತದೆ). ಕೊನೋವೀಡರ್ ಚಲಾಯಿಸುವುದರಿಂದ ಮಣ್ಣು ಸಡಿಲಗೊಂಡು ಬೇರುಗಳಿಗೆ ಹೆಚ್ಚಿನ ಗಾಳಿ ದೊರೆತು ಮರಿಗಳ ಸಂಖ್ಯೆ ವೃದ್ಧಿಸಲು ಸಹಕಾರಿಯಾಗುತ್ತದೆ.



**ನೀರು ನಿರ್ವಹಣೆ:**

ಗದ್ದೆಯಲ್ಲಿ ನೀರು ನಿಲ್ಲದಂತೆ ಸದಾಕಾಲ ತೇವವನ್ನು ಕಾಪಾಡಿಕೊಳ್ಳುವುದು.

ಈ ವಿಧಾನವು ರೈತರ ಲಾಭವರ್ಧನೆ, ಪರಿಸರ ಸಂರಕ್ಷಣೆ ಮತ್ತು ಸ್ಥಿರ ಕೃಷಿಗೆ ಪೂರಕವಾದ ಆಧುನಿಕ ತಂತ್ರವಾಗಿದೆ. ನಮ್ಮ ರಾಜ್ಯದ ರೈತರು ಇದನ್ನು ಹೆಚ್ಚಾಗಿ ಅಳವಡಿಸಿಕೊಂಡರೆ ನೀರಿನ ಕೊರತೆ, ಹೆಚ್ಚಿನ ಖರ್ಚು ಮತ್ತು ಕಡಿಮೆ ಉತ್ಪಾದನೆ ಎಂಬ ಸಮಸ್ಯೆಗಳಿಗೆ ಪರಿಹಾರ ದೊರಕುವುದು.



# ಮನುವಿಕಾಸ ಸಂಸ್ಥೆಗೆ ಇಂಡಿಯಾ ಸಿ.ಎಸ್.ಆರ್ ಮತ್ತು ಸಸ್ಟೇನೆಬಿಲಿಟಿ ಅವಾರ್ಡ್ 2025 ರಾಷ್ಟ್ರೀಯ ಪ್ರಶಸ್ತಿ

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯು ಕೊಡ ಮಾಡುವ ಇಂಡಿಯಾ ಸಿ. ಎಸ್. ಆರ್ ಮತ್ತು ಸಸ್ಟೇನೆಬಿಲಿಟಿ ಅವಾರ್ಡ್–2025, ಮನುವಿಕಾಸ ಸಂಸ್ಥೆಗೆ ನೀರು ನಿರ್ವಹಣೆಯ **NGO** ಕೆಟಗರಿಯಲ್ಲಿ ದೊರಕಿದೆ. ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಶ್ರೀಯುತ ಡಾ. ಪರಮೇಶ್ವರ ಅವರಿಂದ ದಿನಾಂಕ **04. 09. 2025** ರಂದು ಬೆಂಗಳೂರಿನ ಎಫ್.ಕೆ. ಸಿ.ಸಿ.ಐ ನ ಸರ್. ಎಂ. ವಿ. ಆಡಿಟೋರಿಯಂನಲ್ಲಿ ನೀಡಿದರು. ಮನುವಿಕಾಸ ಸಂಸ್ಥೆಯು ಕಳೆದ **20** ವರ್ಷಗಳಿಂದ ಕೆರೆ ಅಭಿವೃದ್ಧಿ, ಕೃಷಿ ಹೊಂಡಗಳ ನಿರ್ಮಾಣ ಮತ್ತು ಬೆಟ್ಟ ಸಂರಕ್ಷಣೆಯ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವುದನ್ನು ಗಮನಿಸಿದ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು ಈ ಪ್ರಶಸ್ತಿಯನ್ನು ನೀಡಿದೆ. ಮನುವಿಕಾಸ ಸಂಸ್ಥೆಯ ನಿರ್ದೇಶಕ ಶ್ರೀ ಗಣಪತಿ ಭಟ್ ಮತ್ತು ಶ್ರೀ ಗುರುದಾಸ್ ಪ್ರಭು ಈ ಪ್ರಶಸ್ತಿಯನ್ನು ಪಡೆದರು

ದೇಶದಾದ್ಯಂತ ಅನೇಕ ಸಂಘ ಸಂಸ್ಥೆಗಳು ಮತ್ತು ಕಂಪನಿಗಳ ಪ್ರತಿನಿಧಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



**71ನೇ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಶಿರಸಿ ತಾಲೂಕಾ ಆಡಳಿತದಿಂದ ತಾಲೂಕಾ ರಾಜ್ಯೋತ್ಸವ ಪ್ರಶಸ್ತಿಗೆ ನಿರ್ದೇಶಕ ಗಣಪತಿ ಭಟ್ಟರವರು ಭಾಜನರಾದರು**



ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ)<br>ಭವಾನಿ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ)<br>ಬಾಲಚಂದ್ರ ಗೌಡ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ)<br>ಪರಾಶುರಾಮ ಮಾದರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94494 53774<br>82960 53961<br>94804 16732<br>81978 87531 |
| ಸಿದ್ದಾಪುರ, ಸೊರಬ | ಪುನೀತ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| ಹಳಿಯಾಳ<br>ದಾಂಡೇಲಿ | ನಿರಂಜನ್ ಕದಂ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಮುಂಡಗೋಡ,<br>ಶಿಗ್ಗಾಂವ್ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಹಾನಗಲ್, ಬ್ಯಾಡಗಿ,<br>ಹಾವೇರಿ | ಮಿಥುನ್ ನಾಯ್ಕ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 95352 71298 |
| ಹೀರೆಕೆರೂರ | ಬಸವರಾಜ್ ಗುಡ್ಡದಹಳ್ಳಿ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 84310 52674 |
| ಕಲಘಟಗಿ, ಹುಬ್ಬಳ್ಳಿ<br>ಕುಂದಗೋಳ | ಬಸವರಾಜ್ ರಡ್ಡೇರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 80953 11643 |
| ಕಾರವಾರ, ಅಂಕೋಲಾ,<br>ಕುಮಟಾ | ನವೀನ್ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 78991 54285 |

ಜಲ ಕೃಷಿ ಸಂಮೃದ್ಧಿ ಯೋಜನೆಯ ಅಡಿಯಲ್ಲಿ ಕೆರೆಗಳ ಪುನರುಜ್ಜೀವನ, ಕೃಷಿ ಹೊಂಡ ನಿರ್ಮಾಣ, ಜಮೀನು ಸಮತಟ್ಟು ಮಾಡುವ ಕೆಲಸವನ್ನು ಮಾಡಲಾಗುತ್ತಿದ್ದು ಕಲಘಟಗಿ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಮಾಹಿತಿ ಈ ಕೆಳಗಿನಂತಿದೆ.

| | | |
|---|---|---|
| ಕಲಘಟಗಿ | ಬಸವರಾಜ ರಡ್ಡೇರ್ | 80953 11643 |
| | ನಾಗರಾಜ ಹಸ್ಲರ್ | 70227 63799 |
| | ರಂಜನ್ ಭಜಂತ್ರಿ | 81053 06242 |
| | ಜಗದೀಶ್ ಈರಣ್ಣನವರ | 78929 18833 |
| | ಸುನೀಲ್ ಪೂಜಾರ್ | 80887 97500 |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ.


MANUVIKASA

ಮನುವಿಕಾಸ

'ಶ್ರೀ ಮಾತಾ' ಬಿಲ್ಡಿಂಗ್, ವಿಜಯನಗರ, ತಾ॥ ಶಿರಸಿ
ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ-581401

Phone: +91 98459 82552 Email: manuvikasa@gmail.com
Website : www.manuvikasa.org